
ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ



ಪಾಪು ಬಾಪು


ಬೊಳುವಾರು ಮಹಮದ್ ಕುಂಞಿ



ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಪಾಪು ಬಾಪು





ಪಾಪು – ಗಾಂಧಿ
(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ
'ಪಾಪು ಗಾಂಧಿ, ಗಾಂಧಿ ಬಾಪು ಅದ ಕತೆ'
ಮಕ್ಕಳ ಕಾದಂಬರಿಯ ಪುಟ್ಟ ರೂಪ

ಲೇಖಕರು : ಬೊಳುವಾರು ಮಹಮದ್ ಕುಂಞಿ
ರೇಖಾಚಿತ್ರಗಳು : ಎಂ. ಎಸ್. ಮೂರ್ತಿ

ಹಕ್ಕುಗಳು :
ಜುಬೇದಾ ಬೋಳುವಾರು ಮತ್ತು
ಆಯುಕ್ತರು , ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ


ಬೆಲೆ : ಉಚಿತ (ಗಾಂಧಿ ವಿಚಾರ ಪ್ರಸಾರ ಉದ್ದೇಶಕ್ಕಾಗಿ)

ನಾಲ್ಕನೇ ಮುದ್ರಣ : ಸೆಪ್ಟೆಂಬರ್ 2019

ಪ್ರತಿಗಳು : 1,20,000
ಪುಟಗಳು : 80 + 4

ಪ್ರಕಟಣೆ :
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಭವನ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು–560 001

ಮುದ್ರಣ :
ಗೀತಾಂಜಲಿ ಗ್ರಾಫಿಕ್ಸ್
ಬಿ–71, ಹೊಸ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರೀಯಲ್ ಎಸ್ಟೇಟ್,
ಬೆಂಗಳೂರು–560010. ದೂರವಾಣಿ : 080–23404232



ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು, ಬಾಪೂಜಿ ಎಂದೇ ಪ್ರಖ್ಯಾತರಾದ ಮಹಾತ್ಮ ಗಾಂಧೀಜಿಯೆಂಬುದು ನಿಮಗೆಲ್ಲ ಗೊತ್ತು. ನಿಮ್ಮೂರ ಶಾಲೆಗಳಲ್ಲಿ ಮಾತ್ರವಲ್ಲ, ಸರಕಾರಿ ಕಚೇರಿಗಳಲ್ಲೂ, ನ್ಯಾಯಾಲಯಗಳಲ್ಲೂ ಬಾಪೂಜಿಯವರ ಭಾವಚಿತ್ರ ಇರಿಸಿರುವುದನ್ನು ನೋಡಿರುವಿರಿ. ಚಿತ್ರದಲ್ಲಿರುವ ಅವರ ಬೋಳು ತಲೆಯನ್ನು, ದೊಡ್ಡ ಕಿವಿಗಳನ್ನು, ಉರುಟು ಕನ್ನಡಕದೆಡೆಯಿಂದ ಇಣುಕುವ ಪ್ರೀತಿ ಸೂಸುವ ಕಣ್ಣುಗಳನ್ನು, ಬಿಳುಪು ಮೀಸೆಯನ್ನು ಮತ್ತು ಬರಿಮೈಗೆ ಸುತ್ತಿರುವ ತುಂಡು ಮೇಲು ವಸ್ತ್ರವನ್ನು ಕಂಡು ಸಂತೋಷಪಟ್ಟಿರುವಿರಿ. ಅವರ ಹುಟ್ಟು ಹಬ್ಬವನ್ನು '**ಗಾಂಧಿ ಜಯಂತಿ**'ಯಂದು, ನಿಮ್ಮ ಶಾಲೆಯಲ್ಲಿ ಸಹಪಾಠಿಗಳ ಜತೆ ಸೇರಿ ಆಚರಿಸಿದ್ದೀರಿ.

ಈಗ, ಈ ಮಹಾತ್ಮನ ಬದುಕಿನಲ್ಲಿ ನಡೆದ ಕೆಲವು ಸಣ್ಣ ಪುಟ್ಟ ಘಟನೆಗಳನ್ನು ಸಣ್ಣ ಪುಟ್ಟ ಕತೆಗಳ ರೂಪದಲ್ಲಿ ಓದುವ ಬನ್ನಿ.





ಕರ್ನಾಟಕ ಸರ್ಕಾರ

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ
ವಿಧಾನಸೌಧ ಬೆಂಗಳೂರು-560 001

ಸಂದೇಶ

"ವಿಶ್ವದಲ್ಲಿ ನಿರಂತರ ಶಾಂತಿ ನೆಲೆಸಬೇಕಾದರೆ, ಶಾಂತಿಯ ಶಿಕ್ಷಣವನ್ನು ಮಕ್ಕಳಿಂದ ಪ್ರಾರಂಭಿಸಬೇಕು" ಎಂದು ತಿಳಿಸಿದ ಮಹಾತ್ಮಾ ಗಾಂಧಿ ಅವರ ಕುರಿತು ಲೆಕ್ಕವಿಲ್ಲದಷ್ಟು ಬಾರಿ ಓದಿದರೂ ಅವರು ಪ್ರತಿಪಾದಿಸಿದ ಜೀವನ ಮೌಲ್ಯ, ಸತ್ಯ, ಅಹಿಂಸೆ ಹಾಗೂ ಆತ್ಮಬಲದ ಕುರಿತು ನಾವು ತಿಳಿಯಬೇಕಾದದ್ದು ಬಹಳಷ್ಟಿದೆ.

ಮಹಾತ್ಮ ಗಾಂಧಿಯವರ 150ನೇ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ "ಪಾಪು-ಬಾಪು" - ಗಾಂಧೀಜಿಯವರನ್ನು ಮಕ್ಕಳಿಗೆ ಪರಿಚಯಿಸುವ ಕಿರುಪುಸ್ತಕವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹೊರತರುತ್ತಿರುವುದು ಅತ್ಯಂತ ಸಮಂಜಸ.

ಪುಸ್ತಕದ ಲೇಖಕ ಬೊಳುವಾರು ಮಹಮದ್ ಕುಂಞ ಅವರು ಸರಳ ಮತ್ತು ಸುಂದರ ಭಾಷೆಯಲ್ಲಿ ಮಕ್ಕಳಿಗೆ ಮಹಾತ್ಮರ ಬದುಕನ್ನು ಚಿತ್ರಿಸಿದ್ದಾರೆ. ಕಿರುಪುಸ್ತಕವು ಮಕ್ಕಳ ಮೇಲೆ ಗಾಢ ಪ್ರಭಾವ ಬೀರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಗಾಂಧೀಜಿ ಅವರ ಜೀವನ ಚರಿತ್ರೆ ಮಕ್ಕಳಾದಿಯಾಗಿ ಸರ್ವರಿಗೂ ಸ್ಫೂರ್ತಿ ತುಂಬಲಿ ಎಂದು ಆಶಿಸುತ್ತೇನೆ.

(ಬಿ.ಎಸ್. ಯಡಿಯೂರಪ್ಪ)





ಪಾಪು

ಉಪವಾಸದ ಬಾಲಪಾಠ

ರಾತ್ರಿಯಿಡೀ ಮಳೆ ಸುರಿದಿತ್ತು. ಮಳೆನೀರಿನಲ್ಲಿ ಆಟವಾಡುವುದೆಂದರೆ ಮೋನು ಪಾಪುವಿಗೆ ಬಹಳ ಇಷ್ಟ.

ಆದರೆ, ಅವನು ನೀರಿನಲ್ಲಿ ಆಟವಾಡುತ್ತಿರುವುದು ರಂಭತ್ತೆಯ ಕಣ್ಣಿಗೇನಾದರೂ ಬಿತ್ತು ಅಂದರೆ ಮುಗಿಯಿತು.

ರಟ್ಟೆ ಹಿಡಿದು ದರದರನೆ ಎಳೆದು ಕೊಂಡು ಹೋಗಿ, ಒದ್ದೆಯಾಗಿದ್ದ ಕೈಕಾಲುಗಳನ್ನು ಒರಸಿ ಮಂಚದ ಮೇಲೆ ಮಲಗಿಸಿ ಬಾಗಿಲು ಮುಚ್ಚಿ, ಹೊರಗಿನಿಂದ ಚಿಲಕ ಹಾಕಿಬಿಡುತ್ತಿದ್ದಳು. ಈವತ್ತೂ ಹಾಗೇ ಆಯಿತು.

ಆದರೆ, ಮೋನು ಪಾಪು ಅಳಲಿಲ್ಲ; ಚೀರಾಡಲಿಲ್ಲ. ಆದರೆ, ಸಂಜೆಯ ಹೊತ್ತು ರಂಭತ್ತೆ ಲೋಟದಲ್ಲಿ ಹಾಲು ತುಂಬಿಸಿಕೊಂಡು 'ಕುಡಿಯೋ ಕಂದಾ', ಎನ್ನುತ್ತಾ ಹತ್ತಿರ ಬಂದಾಗ ಮಾತ್ರ ಅವರ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿ,

ತನ್ನ ಕೋಪವನ್ನು ತೋರಿಸಿಬಿಟ್ಟಿದ್ದ. ಮೋನುಪಾಪು ಯಾವಾಗಲೂ ಹಾಗೆಯೇ. ತನ್ನ ಇಷ್ಟದಂತೆ ನಡೆಯದಾಗ ಅವನು ಎಂದೂ ಅಳುತ್ತಿರಲಿಲ್ಲ. ಗಲಾಟೆ ಮಾಡುತ್ತಿರಲಿಲ್ಲ. ಆ ದಿನವಿಡೀ ಉಪವಾಸ ಇದ್ದು ತನ್ನ ಪ್ರತಿಭಟನೆಯನ್ನು ತೋರಿಸುತ್ತಿದ್ದ.

ಎಷ್ಟೇ ಕಷ್ಟ ಬಂದರೂ ಸುಳ್ಳು ಹೇಳಲಾರೆ

ಮೋನುವಿನ ತಾಯಿ ಪುತಲೀಬಾಯಿಯವರು ಪ್ರತಿ ಮಳೆಗಾಲದ 'ಚಾತುರ್ಮಾಸ'ದಲ್ಲಿ ಉಪವಾಸ ವ್ರತವನ್ನು ನಿಷ್ಠೆಯಿಂದ ಆಚರಿಸುತ್ತಿದ್ದರು. ಜ್ವರ ಬಂದ ದಿನಗಳಲ್ಲೂ ಸೂರ್ಯೋದಯವನ್ನು ಕಾಣದೆ ಆಹಾರ ಮುಟ್ಟುತ್ತಿರಲಿಲ್ಲ.

ಆ ಒಂದು ದಿನ ಆಕಾಶದಲ್ಲಿ ದಟ್ಟ ಮೋಡಗಳು ತೇಲುತ್ತಿದ್ದವು. ಸೂರ್ಯೋದಯದ ಸಮಯವಾಗಿದ್ದರೂ ಸೂರ್ಯ ಕಾಣಿಸುತ್ತಿರಲಿಲ್ಲ. ತಾಯಿಯನ್ನು ಬೇಗ ಊಟ ಮಾಡಿಸುವ ಒಂದೇ ಆಸೆಯಿಂದ ಮೋನು ಪಾಪು ಒಂದು ಉಪಾಯ ಮಾಡಿದ.

ತಾಯಿಗೆ ಕೇಳಿಸುವಂತೆ ಗಟ್ಟಿಯಾಗಿ, 'ಓಹ್! ಸೂರ್ಯ ಕಾಣಿಸಿದ ! ಸೂರ್ಯ ಉದಯಿಸಿದ !' ಎಂದು ಸುಳ್ಳು ಸುಳ್ಳೇ ಕಿರುಚುತ್ತಾ ಒಳಕೋಣೆಗೆ ಧಾವಿಸಿ ಬಂದ. ಆದರೆ, ಮಗ ಸುಳ್ಳು ಹೇಳುತ್ತಿದಾನೆಂಬುದು ತಾಯಿಗೆ ತಿಳಿದುಬಿಟ್ಟಿತ್ತು. ಮಳೆಗಾಲದ ದಿನಗಳಲ್ಲಿ, ಕಪ್ಪು ಮೋಡಗಳು ಕವಿದಿರುವಾಗ ಸೂರ್ಯ ಕಾಣಲು ಸಾಧ್ಯವಿಲ್ಲ ಎಂಬುದು ಅವರಿಗೆ ಗೊತ್ತಿತ್ತು.



ಬಾಲಕ ಮೋಹನದಾಸ
ಕರಮಚಂದ ಗಾಂಧೀ

ಮಗನಿಗೆ ಬುದ್ಧಿ ಕಲಿಸಲು ಅವರೂ ಒಂದು ಉಪಾಯ ಮಾಡಿದರು.

ತಮ್ಮ ಬಲಗೈಯನ್ನು ಮುಂದಕ್ಕೆ ಚಾಚಿ ಹೇಳಿದರು, 'ಮೋನು, ನನ್ನ ಬಲಗೈಯನ್ನು ಚಾಚಿಕೊಂಡು ಕಣ್ಣು ನಾನು ಮುಚ್ಚಿಕೊಳ್ಳುವೆ. ಸೂರ್ಯ ಉದಯಿಸಿದ್ದನ್ನು ನೀನು ನೋಡಿದ್ದು ನಿಜವಾಗಿದ್ದರೆ ನನ್ನ ಕೈಯ್ಯನ್ನು ನಿನ್ನ ಬಲಗೈಯ್ಯಲ್ಲಿ ಮುಟ್ಟಬೇಕು. ಸುಳ್ಳು ಹೇಳಿದ್ದರೆ ಎಡಗೈಯ್ಯಲ್ಲಿ ಮುಟ್ಟಬೇಕು. ನೀನು ಹೇಳಿದ್ದು ನಿಜವೋ ಸುಳ್ಳೋ ಎಂಬುದು ಕಣ್ಣು ಮುಚ್ಚಿಕೊಂಡಿರುವ ನನಗೆ ಕಾಣಿಸುವುದಿಲ್ಲ' ಎಂದು ಹೇಳಿ ಕಣ್ಣು ಮುಚ್ಚಿಕೊಂಡರು.

ಮೋನು ಪಾಪುವಿಗೆ ತನ್ನ ತಪ್ಪಿನ ಅರಿವಾಗಿತ್ತು. ತಾಯಿಯ ಕೈ ಮುಟ್ಟಲು ಭಯವಾಯಿತು.

ಬಹಳ ಹೊತ್ತಾದರೂ ಮೋನು ಪಾಪು ತಮ್ಮ ಕೈಯ್ಯನ್ನು ಮುಟ್ಟದಿದ್ದಾಗ ತಾಯಿಗೆ ಸಂತೋಷವಾಯಿತು.

ತಪ್ಪನ್ನು ಒಪ್ಪಿಕೊಂಡ ಮಗನ ಬಗ್ಗೆ ಹೆಮ್ಮೆ ಅನ್ನಿಸಿತು.

ಮುಚ್ಚಿದ್ದ ತಮ್ಮ ಕಣ್ಣುಗಳನ್ನು ತೆರೆದು, 'ಯಾವುದೇ ಕಾರಣಕ್ಕೂ ಸುಳ್ಳು ಹೇಳಬಾರದು ಮಗು' ಎಂದು ಹೇಳಿ ಪಾಪುವನ್ನು ಎದೆಗೆ ಅಪ್ಪಿಕೊಂಡರು. ಮೋನುಪಾಪು ಅಂದೇ ಶಪಥ ಮಾಡಿಬಿಟ್ಟಿದ್ದನು.

'ಎಷ್ಟೇ ಕಷ್ಟ ಎದುರಾದರೂ ಇನ್ನು ಮುಂದೆ ಸುಳ್ಳು ಹೇಳುವುದಿಲ್ಲ.'

ಪರೀಕ್ಷೆಯಲ್ಲಿ ನಕಲು ಮಾಡಲಾರೆ

ಮೋಹನನು ರಾಜಕೋಟೆಯಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿದ್ದ ದಿನಗಳಲ್ಲೊಮ್ಮೆ ಗೈಲ್ಸ್ ಎಂಬ ಬ್ರಿಟಿಷ್ ಶಿಕ್ಷಣಾಧಿಕಾರಿಯು ಶಾಲೆಯ ತಪಾಸಣೆಗೆಂದು ಬಂದಿದ್ದರು. ವಿದ್ಯಾರ್ಥಿಗಳ ಅಕ್ಷರ ಜ್ಞಾನವನ್ನು ಪರಿಶೀಲಿಸುವ ಸಲುವಾಗಿ ಐದು ಇಂಗ್ಲಿಷ್ ಪದಗಳನ್ನು ಹೇಳಿ, ತಪ್ಪಿಲ್ಲದೆ ಬರೆಯುವಂತೆ ಸೂಚಿಸಿದ್ದರು.

ಮೋಹನನಿಗೆ ಕೆಟಲ್ (KETTLE) ಎಂಬ ಇಂಗ್ಲಿಷ್ ಪದವನ್ನು ಸರಿಯಾಗಿ ಬರೆಯಲು ಬರುತ್ತಿದ್ದರೂ, ಬರೆಯುವಾಗ ಒಂದು ಅಕ್ಷರವನ್ನು ತಪ್ಪಾಗಿ ಬರೆದುಬಿಟ್ಟಿದ್ದನು. ಅವನು ತಪ್ಪಾಗಿ ಬರೆದಿರುವುದು ತರಗತಿಯ ಶಿಕ್ಷಕರ ಕಣ್ಣಿಗೆ ಬಿದ್ದಿತ್ತು. ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೂ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿಸಿರುವೆ ಎಂಬುದಾಗಿ ಆ ಬ್ರಿಟಿಷ್ ಶಿಕ್ಷಣಾಧಿಕಾರಿಯವರಿಗೆ ಗೊತ್ತು ಮಾಡಿ ಮೆಚ್ಚುಗೆ ಗಳಿಸಬಯಸಿದ್ದರು ಆ ಶಿಕ್ಷಕರು. ಅವರು ಮೋಹನನ ಬಳಿಗೆ ಬಂದು ನಿಂತರು. ತಮ್ಮ ಕಾಲಿನ ಬೆರಳುಗಳ ತುದಿಯಿಂದ ಮೋಹನನ ಕಾಲನ್ನು ತಡವಿ, ಪಕ್ಕದ ಹುಡುಗನ ಬರಹವನ್ನು ನೋಡಿ ತಪ್ಪಾಗಿ ಬರೆದ ಪದವನ್ನು ತಿದ್ದಿಕೊಳ್ಳುವಂತೆ ಕಣ್ಣುಗಳಲ್ಲೇ ಸೂಚಿಸಿದ್ದರು.

ಆದರೆ, ಬೇರೆಯವರ ಉತ್ತರಪತ್ರಿಕೆಯಿಂದ ನಕಲು ಮಾಡಲು ಮೋಹನನು ಒಪ್ಪಲಿಲ್ಲ. ತಮ್ಮ ಸಲಹೆಯನ್ನು ತಿರಸ್ಕರಿಸಿದ ಮೋಹನನ ಬಗ್ಗೆ ಶಿಕ್ಷಕರಿಗೆ ಬಹಳ ಸಿಟ್ಟು ಬಂದಿತ್ತು.

ಪರೀಕ್ಷೆ ಮುಗಿದ ಬಳಿಕ ಮೋಹನನನ್ನು ಕರೆಸಿಕೊಂಡು ಗದರಿಸಿದ್ದರು.

ಆದರೆ, ಮೋಹನನಿಗೆ ಮಾತ್ರ ಶಿಕ್ಷಕರ ಮೇಲಿನ ಗೌರವ ಕಡಮೆಯಾಗಲಿಲ್ಲ. ಯಾಕೆಂದರೆ, 'ಹಿರಿಯರ ಒಳ್ಳೆಯತನವನ್ನು ಮಾತ್ರ ಕಲಿಯಬೇಕೇ ಹೊರತು, ಅವರ ಗುಣಾವಗುಣಗಳನ್ನು ಅಲ್ಲ' ಎಂದು ತಾಯಿ ಹೇಳುತ್ತಿದ್ದ ಮಾತನ್ನು ಮೋಹನನು ಚಾಚು ತಪ್ಪದೆ ಪಾಲಿಸುತ್ತಿದ್ದನು.


ಸತ್ಯ ಹರಿಶ್ಚಂದ್ರನಂತಾಗುವೆ

ಒಂದು ರವಿವಾರದ ಮಧ್ಯಾಹ್ನದ ಹೊತ್ತು ಮನೆ ಜಗಲಿಯಲ್ಲಿ ಕುಳಿತಿದ್ದ ಮೋಹನನು ಕಣ್ಣೀರು ಸುರಿಸುತ್ತಿರುವುದನ್ನು ಗಮನಿಸಿದ ಅವನ ಅಕ್ಕ ರಲಿತ, ತಾಯಿಯನ್ನು ಕರೆದುಕೊಂಡು ಬಂದಿದ್ದಳು. ಮಗನ ಬಳಿಗೆ ಹೋದ ತಾಯಿ, 'ಏನಾಯಿತು ಮೋನೂ?' ಎಂದು ಪ್ರೀತಿಯಿಂದ ಪ್ರಶ್ನಿಸಿದ್ದರು. ಆದರೆ, ತನ್ನ ಅಳುವಿನ ಕಾರಣವನ್ನು ಹೇಳಲು ಮೋನುವಿಗೆ ನಾಚಿಕೆಯಾಗಿತ್ತು.

ನಡೆದದ್ದು ಇಷ್ಟು:

ಹಿಂದಿನ ದಿನದ ಸಂಜೆ, ಮೋಹನನು ಶಾಲೆಯ ಪಕ್ಕದ ಮೈದಾನದಲ್ಲಿ ಪ್ರದರ್ಶಿಸಲ್ಪಡುತ್ತಿದ್ದ 'ಸತ್ಯ ಹರಿಶ್ಚಂದ್ರ' ನಾಟಕ ನೋಡಲು ಹೋಗಿದ್ದನು.

ಎಂತಹಾ ಕಷ್ಟ ಎದುರಾದರೂ ಸತ್ಯವನ್ನಲ್ಲದೆ



ಮಹಾತ್ಮಾ ಗಾಂಧೀಜಿಯವರ ಜನ್ಮಸ್ಥಳ

ಬೇರೇನನ್ನೂ ಹೇಳಲಾರನೆಂದು ಜಗತ್ಪ್ರಸಿದ್ಧನಾಗಿದ್ದವನು ಮಹಾರಾಜ ಸತ್ಯ ಹರಿಶ್ಚಂದ್ರ. ಅವನನ್ನು ಪರೀಕ್ಷೆ ಮಾಡುವ ಉದ್ದೇಶದಿಂದ ವಿಶ್ವಾಮಿತ್ರನೆಂಬ ಮುನಿಯು ಹರಿಶ್ಚಂದ್ರನಿಗೆ ಬಗೆ ಬಗೆಯಲ್ಲಿ ಕಾಡಿಸಿ, ಅವನಿಂದ ಒಂದು ಸುಳ್ಳನ್ನಾದರೂ ಹೇಳಿಸಲು ಯತ್ನಿಸುತ್ತಿದ್ದನು. ಆದರೆ, ಎಲ್ಲ ಕಷ್ಟಗಳನ್ನೂ ಧೈರ್ಯದಿಂದ ಎದುರಿಸುವ ರಾಜಾ ಹರಿಶ್ಚಂದ್ರನನ್ನು ಮೆಚ್ಚಿಕೊಳ್ಳುತ್ತಲೇ, ತಾನು ನೋಡುತ್ತಿರುವುದು ನಾಟಕವೆಂಬುದನ್ನೂ ಮರೆತ ಮೋಹನನು ದುಃಖದಿಂದ ಬಿಕ್ಕಳಿಸಿ ಬಿಕ್ಕಳಿಸಿ ಅತ್ತಿದ್ದನು.

ಮರುದಿನವೂ ನಾಟಕದ ಗುಂಗಿನಲ್ಲೇ ಇದ್ದ ಮೋಹನನು ನಾಟಕದ ದೃಶ್ಯಗಳನ್ನು ನೆನಪಿಸಿಕೊಳ್ಳುತ್ತ, ತಾನು ಕೂಡಾ ರಾಜಾ ಹರಿಶ್ಚಂದ್ರನಂತೆ ಸತ್ಯಸಂಧನಾಗಬೇಕೆಂದು ಯೋಚಿಸುತ್ತಾ ಅಂಗಳದಲ್ಲಿ ಕುಳಿತಿದ್ದನು. ಅವನ ಅರಿವಿಲ್ಲದೆ ಸುರಿದ ಕಣ್ಣೀರನ್ನು ತಪ್ಪಾಗಿ ತಿಳಿದ ರಲಿತಕ್ಕ, ಮನೆಯವರೆಲ್ಲ ಹೊರಗೆ ಬಂದು ಅಳುವ ಮೋಹನನನ್ನು ನೋಡುವಂತೆ ಮಾಡಿಬಿಟ್ಟಿದ್ದಳು.

ಮೋಹನನ ಅಳುವಿನ ಕಾರಣವನ್ನು ತಿಳಿದ ಹಿರಿಯವರೆಲ್ಲ ಅವನ ಬಗ್ಗೆ ಹೆಮ್ಮೆಪಟ್ಟರು.

ತಾಯಿಯು ತನ್ನ ಮಗನ ತಲೆಯನ್ನು ಅಭಿಮಾನದಿಂದ ಸವರುತ್ತಾ, 'ಸತ್ಯ ಹರಿಶ್ಚಂದ್ರನಂತೆ ಆಗುವ ನಿನ್ನ ಆಸೆ ನೆರವೇರಲಿ' ಎಂದು ಆಶೀರ್ವಾದ ಮಾಡಿದ್ದರು.

ಮದುವೆಯೂ ಆಯಿತು

ಆ ದಿನಗಳಲ್ಲಿ ದೇಶಾದ್ಯಂತ 'ಬಾಲ್ಯವಿವಾಹ'ವೆಂಬ ಪದ್ಧತಿ ಆಚರಣೆಯಲ್ಲಿತ್ತು.

ಮಕ್ಕಳು ಆಟವಾಡುವ ಸಣ್ಣ ವಯಸ್ಸಿನಲ್ಲೇ ಮದುವೆ ಮಾಡಿಸುವುದು ಒಳ್ಳೆಯದು ಎಂಬುದಾಗಿ ನಂಬಿದ್ದ ಹಿರಿಯರು, ಅಂತಹ ಮದುವೆ ಸಮಾರಂಭಗಳನ್ನು ಬಹಳ ಅದ್ದೂರಿಯಾಗಿಯೇ ನಡೆಸುತ್ತಿದ್ದರು. ಆಗ ದೇಶವನ್ನಾಳುತ್ತಿದ್ದ ಬ್ರಿಟಿಷರ ಕಾನೂನುಗಳಂತೆ ಬಾಲ್ಯವಿವಾಹ ಪದ್ಧತಿಯು ಅಪರಾಧವಾಗಿದ್ದಿರಲಿಲ್ಲ. ದೊಡ್ಡ ದೊಡ್ಡ ಸಿರಿವಂತರ ಕುಟುಂಬದಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹದ ಸಂಭ್ರಮಗಳಲ್ಲಿ ಸರಕಾರದ ಹಿರಿಯ ಅಧಿಕಾರಿಗಳೂ ಭಾಗವಹಿಸಿ ಶುಭ ಹಾರೈಸುತ್ತಿದ್ದರು.

ಮೋಹನದಾಸನಿಗಿಂತ ಒಂಬತ್ತು ವರ್ಷ ಹಿರಿಯನಾಗಿದ್ದ ಅಣ್ಣ ಲಕ್ಷ್ಮೀದಾಸನಿಗೆ ಅದಾಗಲೇ ಮದುವೆಯಾಗಿತ್ತು.

ಮೋಹನನಿಗಿಂತ ಎರಡು ವರ್ಷ ಹಿರಿಯವನಾಗಿದ್ದ ಸಣ್ಣಣ್ಣ ಕರ್ಸನ್‌ದಾಸನಿಗೂ, ಒಂದು ವರ್ಷ ಹಿರಿಯವನಾಗಿದ್ದ ನೆಂಟರ ಹುಡುಗನೊಬ್ಬನಿಗೂ ಜೊತೆಯಲ್ಲೇ ಮದುವೆ ನಿಶ್ಚಯವಾಗಿತ್ತು.

ಆ ಎರಡು ಮದುವೆಗಳ ಜೊತೆಯಲ್ಲೇ ಮೋಹನನಿಗೂ ಮದುವೆ ಮಾಡಿದರೆ, ವೆಚ್ಚದಲ್ಲಿ ಉಳಿತಾಯವಾಗುತ್ತದೆ ಎಂಬ ಯೋಚನೆಯಿಂದ, ಮತ್ತೊಬ್ಬಳು ಹುಡುಗಿಯನ್ನು ಹುಡುಕಿ, ಮೋಹನನಿಗೂ ಮದುವೆ ನಿಶ್ಚಯ ಮಾಡಿದ್ದರು.



ಮೋಹನದಾಸ ಕರಮಚಂದ ಗಾಂಧಿ ಹಾಗೂ ಕಸ್ತೂರ್‌ಬಾ

ಹೀಗಾಗಿ, ಹೆಚ್ಚು ಕಮ್ಮಿ ಮೋಹನನ ವಯಸ್ಸಿನವಳೇ ಆಗಿದ್ದ, ಶಾಲೆಯ ಮುಖವನ್ನೇ ಕಂಡಿರದಿದ್ದ, ಕಸ್ತೂರಿ ಎಂಬ ಮುದ್ದು ಹುಡುಗಿಯು ಮೋಹನದಾಸನ ಹೆಂಡತಿಯಾಗಿ ಬಂದಳು.

ಜನ್ಮ ಮತ್ತು ಕರ್ಮ

ಒಂದು ಮಧ್ಯಾಹ್ನ ಮೋಹನದಾಸನು ಆಟವಾಡಲೆಂದು ಶಾಲೆಯ ಬಯಲಿಗೆ ನಡೆದುಕೊಂಡು ಹೋಗುತ್ತಿದ್ದನು. ಅರ್ಧ ದಾರಿಯಲ್ಲಿದ್ದಾಗ ಮಳೆ ಸುರಿಯತೊಡಗಿದ್ದರಿಂದ ರಸ್ತೆಬದಿಯ ಅಂಗಡಿಯೊಂದರ ಮಾಡಿನ ಅಡಿಯಲ್ಲಿ ನಿಂತನು. ಮಳೆಯಿಂದ ತೊಯ್ಯುವುದರಿಂದ ತಪ್ಪಿಸಿಕೊಳ್ಳಬಯಸಿದ್ದ ನಾಲ್ಕು ಮಂದಿ ಹಿರಿಯರೂ ಅಲ್ಲಿ ನಿಂತಿದ್ದರು.

ಅದೇ ಹೊತ್ತಿಗೆ ಸರಿಯಾಗಿ, ಕಪ್ಪು ಬಣ್ಣದ ಯುವಕನೊಬ್ಬ ಅಲ್ಲಿಗೆ ಓಡೋಡಿ ಬಂದನು. ಆದರೆ ಅವನು ಅಂಗಡಿಯ ಮಾಡಿನ ನೆರಳಿಗೆ ಬಾರದೆ, ಸ್ವಲ್ಪವೇ ದೂರದಲ್ಲಿದ್ದ ಮರವೊಂದರ ಕೆಳಗೆ ಹೋಗಿ ನಿಂತುಕೊಂಡನು. ಅದನ್ನು ಕಂಡ ಮೋಹನದಾಸನಿಗೆ ಆಶ್ಚರ್ಯವಾಯಿತು. ತನ್ನ ಬಳಿಗೆ ಬಂದು ಮಾಡಿನ ಅಡಿಯಲ್ಲಿ ನಿಂತುಕೊಳ್ಳುವಂತೆ ಆ ಕಪ್ಪು ಯುವಕನನ್ನು ಗಟ್ಟಿ ಧ್ವನಿಯಲ್ಲಿ ಕರೆದನು. ಆದರೆ, ಆ ಯುವಕನು ಮೋಹನದಾಸನ ಮಾತನ್ನು ಕೇಳಿಯೂ ಕೇಳಿಸಿಕೊಳ್ಳದವನಂತೆ ಕಲ್ಲಿನಂತೆ ನಿಂತುಬಿಟ್ಟಿದ್ದನು.

ಆಗ, ಜೋರಾಗಿ ನಕ್ಕ ಅಂಗಡಿಯ ಮಾಲಕನು ಮೋಹನದಾಸನಿಗೆ ತಿಳಿಯಹೇಳುವಂತೆ, 'ನೋಡು ಮಗೂ, ಅದು ಅವರವರ ಕರ್ಮದ ಫಲ. ಅವನು ಪೂರ್ವಜನ್ಮದಲ್ಲಿ ಪಾಪ ಮಾಡಿದ್ದನು. ಕರ್ಮದ ಫಲವನ್ನು ತನ್ನ ಜತೆಗೇ ಹೊತ್ತುಕೊಂಡು ಬಂದು ಈ ಜನ್ಮದಲ್ಲಿ ನೀಚಕುಲದಲ್ಲಿ ಹುಟ್ಟಿದ್ದಾನೆ. ಆದ್ದರಿಂದ ಅವನಿಗೆ ನಮ್ಮಂತವರ ಜೊತೆಗೆ ನಿಲ್ಲುವ ಹಕ್ಕು ಇಲ್ಲ' ಎಂದನು.

ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದರೆ ಈ ಜನ್ಮದಲ್ಲಿ ಮಳೆಗೆ ಒದ್ದೆಯಾಗಿ ನಿಲ್ಲಬೇಕೆನ್ನುವ ವಾದ, ಮೋಹನದಾಸನಿಗೆ ಬಹಳ ತಮಾಷೆಯಾಗಿ ಕಂಡಿತು. ಹಾಗಾದರೆ, ತಾನು ಹಿಂದಿನ ಜನ್ಮದಲ್ಲಿ ಒಳ್ಳೆಯ ಕೆಲಸ ಮಾಡಿದ್ದಿರಬೇಕು. ಆದ್ದರಿಂದ ತಾನು ಉತ್ತಮ ಕುಲದಲ್ಲಿ ಹುಟ್ಟಿರುವೆ. ಅದೇ ಕಾರಣದಿಂದ ತಾನೀಗ ಹೊರಗೆ ಹೋಗಿ ನಿಂತರೂ, ಸುರಿಯುತ್ತಿರುವ ಮಳೆ ನೀರಿಗೆ ತಾನು ಒದ್ದೆಯಾಗಬಾರದು.

ಹೀಗೆಂದು ಯೋಚಿಸಿದ ಮೋಹನದಾಸನು, ತಾನು ನಿಂತಿರುವಲ್ಲಿಂದ ಓಡಿ ಹೋಗಿ ಆ ಮರದ ಅಡಿಯಲ್ಲಿ ಯುವಕನ ಬಳಿ ನಿಂತುಬಿಟ್ಟನು. ಆದರೆ ಅವನು ನಿರೀಕ್ಷಿಸಿದಂತೆ ಮಳೆ ನಿಲ್ಲಲಿಲ್ಲ. ಪೂರ್ವಜನ್ಮದ ಪಾಪ ಪುಣ್ಯದ ಫಲಗಳು ಎಂಬ ನಂಬಿಕೆಗಳೆಲ್ಲ ಹಸಿ ಹಸಿ ಸುಳ್ಳು ಎಂಬುದು ಅವನಿಗೆ ಅರ್ಥವಾಗಿತ್ತು.

ಅಪರಾಧ ಮತ್ತು ಶಿಕ್ಷೆ

ತನ್ನ ಚಿಕ್ಕಣ್ಣನ ಒತ್ತಾಯಕ್ಕೆ ಇಲ್ಲವೆನ್ನಲಾಗದೆ ಮೋಹನದಾಸನು ಒಂದು ತಪ್ಪು ಮಾಡಿದ್ದನು. ಬಂಗಾರದ ಕೈಗಡದ ತುಂಡೊಂದನ್ನು ಚಿನಿವಾರನ ಅಂಗಡಿಯಲ್ಲಿ ಮಾರಾಟ ಮಾಡಲು ಚಿಕ್ಕಣ್ಣನಿಗೆ ಮೋಹನದಾಸನು ಸಹಾಯ ಮಾಡಿದ್ದನು. ಆದರೆ, ತನ್ನ ತಪ್ಪಿನ ಬಗ್ಗೆ ಪಶ್ಚಾತಾಪದಿಂದ ಕೊರಗುತ್ತಿದ್ದನು.

ತನ್ನ ತಪ್ಪನ್ನು ಹೆತ್ತವರಿಗೆ ತಿಳಿಸಿ ಕ್ಷಮಾಪಣೆ ಯಾಚಿಸಲು ನಿರ್ಧರಿಸಿದ್ದನು. ಅದಕ್ಕಾಗಿ ಕ್ಷಮೆಯಾಚನೆಯ ಒಂದು ಪತ್ರವನ್ನೂ ಬರೆದು ಇರಿಸಿಕೊಂಡಿದ್ದನು. ಒಂದು ದಿನ ಶಾಲೆಗೆ ಹೊರಡುವ ಮೊದಲು ತಂದೆಯವರು ಮಲಗಿದ್ದ ಕೋಣೆಗೆ ಹೋದನು.

ಅನಿರೀಕ್ಷಿತವಾಗಿ ಬಂದ ಪ್ರೀತಿಯ ಮಗನ ಮುಖದಲ್ಲಿ ನೋವಿನ ಗೆರೆಗಳಿರುವುದನ್ನು ಕಂಡ ಕರಮಚಂದ್ ಗಾಂಧಿ ಆತಂಕಗೊಂಡಿದ್ದರು. ಅವನು ಜೇಬಿನಿಂದ ಪತ್ರವೊಂದನ್ನು ಹೊರಗೆಳೆಯುತ್ತಿದ್ದಾಗ, ಕೈ ಬೆರಳುಗಳು ನಡುಗುತ್ತಿರುವುದೂ ಅವರ ಸೂಕ್ಷ್ಮದೃಷ್ಟಿಗೆ ಕಾಣಿಸಿತ್ತು.

ಪತ್ರವನ್ನು ತಂದೆಯವರತ್ತ ಚಾಚಿದ ಮೋಹನದಾಸನು, ತಲೆ ತಗ್ಗಿಸಿ ಕುಳಿತುಬಿಟ್ಟನು.

ಕರಮಚಂದ್ ಗಾಂಧಿ ಪತ್ರವನ್ನು ಕುತೂಹಲದಿಂದ ಓದಲಾರಂಭಿಸಿದರು. ಪೂರ್ತಿಯಾಗಿ ಓದಿದ ಬಳಿಕ



ಗಾಂಧೀಜಿಯವರ ತಂದೆ ಕರಮಚಂದ್ ಗಾಂಧಿ

ತಲೆಯೆತ್ತಿ, ತನ್ನೆದುರು ತಲೆ ತಗ್ಗಿಸಿ ಕುಳಿತ ಮಗನನ್ನು, ಅಚ್ಚರಿ ಮತ್ತು ಅಭಿಮಾನದಿಂದ ದಿಟ್ಟಿಸಿದ್ದರು.

ತಂದೆಯ ಮೌನದಿಂದ ಮೋಹನದಾಸನು ಗಾಬರಿಗೊಂಡಿದ್ದನು.

ಕಣ್ಣು ಮುಚ್ಚಿಕೊಂಡು ಮಲಗಿದ್ದಲ್ಲಿಂದಲೇ ಕರಮಚಂದ್ ಗಾಂಧಿ ತನ್ನ ಎರಡೂ ಕೈಗಳನ್ನು ಚಾಚಿದ್ದರು. ಹಲವಾರು ವರ್ಷಗಳಿಂದ ತಂದೆಯ ಆಲಿಂಗನದಿಂದ ವಂಚಿತನಾಗಿದ್ದ ಮೋಹನದಾಸನಿಗೆ ರೋಮಾಂಚನವಾಗಿತ್ತು. ಕೂಡಲೇ ಎದ್ದು ತಂದೆಯ ಎದೆಯ ಮೇಲೆ ತಲೆಯಿರಿಸಿ ನೆಮ್ಮದಿಯ ನಿಟ್ಟುಸಿರಿಟ್ಟನು. ತಂದೆಯ ಮೌನವು ಮೋಹನದಾಸನಿಗೆ ಹೊಸದೊಂದು ಪಾಠವನ್ನು ಕಲಿಸಿತ್ತು.

ತಪ್ಪು ಮಾಡಿದವನಿಗೆ ಶಿಕ್ಷೆಯಿರುವುದು ಬರಿಯ ಶಿಕ್ಷಿಸುವುದಕ್ಕಲ್ಲ. ಅದು ಶಿಕ್ಷೆಗೊಳಗಾದವನ ತಪ್ಪನ್ನು ಸರಿಪಡಿಸುವ ಒಂದು ಸಾಧನ. ಮೋಹನದಾಸನ ಮನಸ್ಸು ಈಗ ತಿಳಿಯಾಗಿತ್ತು.

ಕಡಲು ದಾಟಿದರೆ ಬಹಿಷ್ಕಾರ

ಗಾಂಧಿ ಕುಟುಂಬದ ಹಿತೈಷಿಯಾಗಿದ್ದ ಮಾವಜೀ ದವೆ ಎಂಬವರು, ಕರಮಚಂದ್ ಗಾಂಧಿ ತೀರಿಕೊಂಡ ಬಳಿಕವೂ ಆಗಾಗ್ಗೆ ಮನೆಗೆ ಬಂದು ಕುಶಲ ವಿಚಾರಿಸಿಕೊಂಡು ಹೋಗುತ್ತಿದ್ದರು. ವಂಶ ಪಾರಂಪರ್ಯವಾಗಿ ಗಾಂಧಿ ಕುಟುಂಬಕ್ಕೆ ಬ್ರಿಟಿಷರು ನೀಡಿದ್ದ ದಿವಾನ ಪದವಿಯನ್ನು ಮುಂದಿನ ತಲೆಮಾರಿಗೂ ಕೊಡುತ್ತಾರೆ ಎಂಬ ನಂಬಿಕೆ ದವೆಯವರಿಗಿರಲಿಲ್ಲ. ಆದ್ದರಿಂದಲೇ, ಮೋಹನದಾಸನ್ನು ಮೂರು ವರ್ಷಗಳ ಕಾಲ ಇಂಗ್ಲೆಂಡಿಗೆ ಕಳುಹಿಸಿ 'ಬ್ಯಾರಿಸ್ಟರ್' ಎಂಬ ಕಾನೂನು ಪದವಿ ಓದಿಸುವಂತೆ ಸಲಹೆ ಮಾಡಿದ್ದರು.

ಮೋಹನದಾಸನಿಗೇನೋ ಈ ಸಲಹೆ ಬಹಳ ಆಕರ್ಷಕವಾಗಿ ಕಾಣಿಸಿತ್ತು. ಆದರೆ ಗಾಂಧಿ ಕುಟುಂಬದವರೆಲ್ಲ ವಿರೋಧಿಸಿದ್ದರು. ಮೋಹನದಾಸನು ಕಡಲು ದಾಟಿದರೆ ಧರ್ಮಭ್ರಷ್ಟನಾಗುತ್ತಾನೆ ಎಂದೇ ಅವರೆಲ್ಲ ನಂಬಿದ್ದರು. ತನ್ನ ತಾಯಿಯ ಭಯವನ್ನು ಸರಿಯಾಗಿ ಗ್ರಹಿಸಿದ್ದ ಮೋಹನದಾಸನು, 'ವಿದೇಶದಲ್ಲಿರುವಾಗ ನಾನು ಮದ್ಯ, ಮಾಂಸ ಮತ್ತು ಹೆಣ್ಣು ಮುಟ್ಟುವುದಿಲ್ಲ' ಎಂಬ ಪ್ರತಿಜ್ಞೆ

ಮಾಡುವ ಮೂಲಕ ತಾಯಿಯನ್ನು ಒಪ್ಪಿಸಿದ್ದನು.

ಗಾಂಧಿ ಕುಟುಂಬದ ಹುಡುಗನೊಬ್ಬನು ಕಡಲು ದಾಟಲು ಹೊರಟಿರುವ ಸುದ್ದಿಯು, ಜಾತಿ ಬಾಂಧವರ ನಡುವೆ ಬಿರುಗಾಳಿಯನ್ನೇ ಎಬ್ಬಿಸಿತ್ತು. ಅದುವರೆಗೆ ಯಾರೂ ಮಾಡಿರದಿದ್ದ ಧರ್ಮಬಾಹಿರವೆಂದೇ ಅವರೆಲ್ಲ ನಂಬಿದ್ದ ಕಡಲು ದಾಟುವ ಸಾಹಸವನ್ನು ಮಾಡಲು ಹೊರಟಿರುವ ಮೋಹನದಾಸನ ಮನೆಯವರ ವಿರುದ್ಧ ಅವರೆಲ್ಲ ತಿರುಗಿಬಿದ್ದಿದ್ದರು.

ಆದರೆ, ಮೋಹನದಾಸನ ಹಿರಿಯಣ್ಣ, ಮೋಹನ ದಾಸನ ಬೆಂಬಲಕ್ಕೆ ನಿಂತಿದ್ದರು. ಗೆಳೆಯರಿಂದ ಸಾಲ ಪಡೆದು, ತನ್ನ ಕಿರಿಯ ಸೋದರನನ್ನು, ಮುಂಬಾಯಿ ಬಂದರಿನ ಮೂಲಕ ಹಡಗಿನಲ್ಲಿ ಇಂಗ್ಲೆಂಡಿಗೆ ಕಳುಹಿಸಿಯೇಬಿಟ್ಟಿದ್ದರು.

ಆಗ ಮೋಹನದಾಸನಿಗೆ ಹದಿನೆಂಟು ವರ್ಷ ವಯಸ್ಸು.


ಬ್ಯಾರಿಸ್ಟರ್ ಗಾಂಧಿ

ಇಂಗ್ಲೆಂಡಿನ 'ಬ್ಯಾರಿಸ್ಟರ್' ಪದವಿ ಪಡೆಯುವುದು ಆ ದಿನಗಳಲ್ಲಿ ತೀರಾ ಸುಲಭದ ಕೆಲಸವಾಗಿತ್ತು. ಮೂರು ವರ್ಷಗಳ ಬ್ಯಾರಿಸ್ಟರ್ ಕಲಿಕೆಯ ಸಮಯದಲ್ಲಿ, ಪ್ರತಿಯೊಂದು ವರ್ಷದಲ್ಲೂ ತಲಾ ಮೂರು ತಿಂಗಳ ನಾಲ್ಕು 'ಅವಧಿ'ಗಳಿದ್ದವು. ಮೂರು ವರ್ಷಗಳಲ್ಲಿ ಒಟ್ಟು ಹನ್ನೆರಡು 'ಅವಧಿ'ಗಳು.

ಬ್ಯಾರಿಸ್ಟರ್ ಪಠ್ಯಕ್ರಮವೂ ಅತ್ಯಂತ ಸುಲಭವಿತ್ತು. ಪಠ್ಯ ಪುಸ್ತಕಗಳನ್ನು ಮೂರು ವರ್ಷಗಳ ಕಾಲ ಇಡಿಯಾಗಿ ಓದುವುದಕ್ಕಿಂತ, ಪ್ರತಿ ಮೂರು ತಿಂಗಳಲ್ಲಿ ನಡೆಸಲಾಗುತ್ತಿದ್ದ ಪರೀಕ್ಷೆಗಳಿಗೆ ಸಿದ್ಧನೋಟ್ಸ್'ಗಳನ್ನು ಉರು ಹೊಡೆದರೆ ಸುಲಭದಲ್ಲಿ ಪರೀಕ್ಷೆ ಪಾಸಾಗಲು ಸಾಧ್ಯವಿತ್ತು.

ಆದರೆ, ಸಿದ್ಧ ನೋಟ್ಸ್'ಗಳನ್ನು ಉರುಹೊಡೆದು ಪರೀಕ್ಷೆ ಬರೆಯುವ ಸುಲಭದ ದಾರಿಯನ್ನು ತಿರಸ್ಕರಿಸಿದ್ದ ಮೋಹನದಾಸನು, ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬ್ಯಾರಿಸ್ಟರ್ ಮೋಹನದಾಸ ಕರಮಚಂದ್ ಗಾಂಧಿ, ಬಾರ್ ಎಟ್ ಲಾ; ಎಂಬುದಾಗಿ ಹೆಮ್ಮೆಯಿಂದ ತನ್ನ ಹೆಸರನ್ನು ದಾಖಲಿಸಿದ್ದನು.

ಭಾರತದ ಬೊಂಬಾಯಿ ಬಂದರಿಗೆ ಹೊರಟು ನಿಂತಿದ್ದ ಎಸ್. ಎಸ್. ಅಸ್ಸಾಂ ಎಂಬ ಹೆಸರಿನ ಹಡಗು ಹತ್ತಿ, ಇಂಗ್ಲೆಂಡಿನ ನೆಲಕ್ಕೆ ವಿದಾಯ ಹೇಳಿದನು. ಆದರೆ, ಮೋಹನದಾಸನು ಮರಳಿ ಮತೃಭೂಮಿಗೆ ತಲುಪುವಷ್ಟರಲ್ಲಿ ಅವನ ಪ್ರೀತಿಯ ಅಮ್ಮ ಪುತಲೀಬಾಯಿಯವರು ತೀರಿಕೊಂಡಿದ್ದರು.



ಇಂಗ್ಲೆಂಡಿನಲ್ಲಿ ಸಹವಕೀಲರೊಂದಿಗೆ ಗಾಂಧಿ

ನಿರುದ್ಯೋಗಿ ಬಾರ್-ಅಟ್-ಲಾ

ಇಂಗ್ಲೆಂಡಿನಲ್ಲಿ 'ಬಾರ್ ಎಟ್ ಲಾ' ಪದವಿಗಾಗಿ ಹಗಲು ರಾತ್ರಿ ಓದಿಕೊಂಡಿದ್ದ ವಿಷಯಗಳು, ಭಾರತದಲ್ಲಿ ವಕೀಲಿ ವೃತ್ತಿ ನಡೆಸುವಾಗ ಯಾವ ಉಪಯೋಗಕ್ಕೂ ಬರುತ್ತಿರಲಿಲ್ಲ. ರಾಜಕೋಟೆಯಲ್ಲಿ ವಕೀಲ ವೃತ್ತಿ ನಡೆಸಿದರೆ ಊಟಕ್ಕೇ ಕಷ್ಟ ಎಂದರಿತ ಹಿರಿಯಣ್ಣ ಲಕ್ಷ್ಮೀದಾಸ್, ಗಾಂಧಿಯನ್ನು ಬೊಂಬಾಯಿಯ ಹೈಕೋರ್ಟಿನಲ್ಲಿ ಅದೃಷ್ಟ ಪರೀಕ್ಷೆ ಮಾಡಲು ಕಳುಹಿಸಿದ್ದರು.

ಗಾಂಧಿ ಮನಸ್ಸು ಮಾಡಿದ್ದರೆ, ದಲ್ಲಾಳಿಗಳ ಮೂಲಕ ದೊಡ್ಡ ದೊಡ್ಡ ಮೊಕದ್ದಮೆಗಳನ್ನು ಪಡೆದು ತಿಂಗಳಿಗೆ ಏನಿಲ್ಲವೆಂದರೂ ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸಬಹುದಾಗಿತ್ತು. ಆದರೆ, ಅಂತಹ ಹಣಕ್ಕೆ ಗಾಂಧಿ ತಯಾರಿದ್ದಿರಲಿಲ್ಲ. ಹಾಗಾಗಿ ಅವರು ಸಂಪಾದನೆ ಕಾಣದೆ ರಾಜಕೋಟೆಗೆ ಮರಳಿದರು.

ರಾಜಕೋಟೆಯಲ್ಲಿ ಹೊಸ ಕಚೇರಿ ತೆರೆದ ಗಾಂಧಿ, ಅಲ್ಪ ಸ್ವಲ್ಪ ಸಂಪಾದನೆಯನ್ನೇನೋ ಮಾಡಲಾರಂಭಿಸಿದ್ದರು. ಆದರೆ, ಸಂಪಾದನೆಯಾಗುತ್ತಿದ್ದದ್ದು ಮೊಕದ್ದಮೆಗಳನ್ನು ನ್ಯಾಯಾಲಯದಲ್ಲಿ ವಾದಿಸಿ ಗೆಲ್ಲುವುದರಿಂದ ಅಲ್ಲ; ಬದಲಿಗೆ, ಕಕ್ಷಿದಾರರಿಗೆ ಅರ್ಜಿ ಬರೆದು ಕೊಡುವುದರಿಂದ.

ಅದೇ ದಿನಗಳಲ್ಲಿ ಪೋರ್ ಬಂದರಿನ ಪ್ರತಿಷ್ಠಿತ 'ಮೆಮನ್' ಎಂಬ ಸಂಸ್ಥೆಯ ಮಾಲಕರಾದ ಅಬ್ದುಲ್ಲಾ ಸೇಠ್ ಎಂಬವರಿಂದ ಗಾಂಧಿಯ ಅಣ್ಣನವರಿಗೆ ಒಂದು ಪತ್ರ

ಬಂದಿತ್ತು. ದಕ್ಷಿಣ ಆಫ್ರಿಕಾದಲ್ಲೂ ವ್ಯವಹಾರವಿದ್ದ ಆ ಸಂಸ್ಥೆಯ ಪರವಾಗಿ ಕೆಲಸ ಮಾಡುತ್ತಿರುವ ಹಿರಿಯ ವಕೀಲರುಗಳಿಗೆ ಸಹಾಯ ಮಾಡಲು ಯುವಕರಾದ ವಕೀಲರುಗಳು ಬೇಕಾಗಿದ್ದರು. ಬ್ಯಾರಿಸ್ಟರ್ ಗಾಂಧಿಯನ್ನು ಕಳುಹಿಸಿಕೊಟ್ಟರೆ ಎಲ್ಲ ಖರ್ಚು ಕಳೆದು 105 ಪೌಂಡ್ ಸಂಭಾವನೆ ಕೊಡುತ್ತೇವೆ ಎಂದೂ ಬರೆಯಲಾಗಿತ್ತು.

ಇಪ್ಪತ್ತನಾಲ್ಕು ವರ್ಷದ ಯುವಕನಿಗೆ ನೋವು ಕೊಟ್ಟ ತನ್ನೂರು ಬಿಡುವ ಹಟ.

ಹೊಸ ಊರು ನೋಡುವ ಆಸೆ.

ಗಾಂಧಿ ದಕ್ಷಿಣ ಆಫ್ರಿಕಾದ ಹಡಗು ಹತ್ತಿದರು.

ರೈಲಿನಿಂದ ಹೊರಗೆ ತಳ್ಳಿದರು

ಅಬ್ದುಲ್ಲಾ ಸೇಠರ ಸಲಹೆಯಂತೆ ಗಾಂಧಿ ಒಂದು ದಿನ ಡರ್ಬನಿನಿಂದ ಪ್ರಿಟೋರಿಯಕ್ಕೆ ಹೊರಟಿದ್ದರು. ಪ್ರಥಮ ದರ್ಜೆಯ ರೈಲು ಟಿಕೇಟನ್ನು ಅವರಿಗಾಗಿ ಕಾದಿರಿಸಲಾಗಿತ್ತು.

ಆದರೆ, ಟಿಕೇಟು ಪರಿಶೀಲನೆಗೆಂದು ಬಂದಿದ್ದ ರೈಲು ಅಧಿಕಾರಿಗೆ, ಪ್ರಥಮ ದರ್ಜೆಯ ಬೋಗಿಯಲ್ಲಿ ಬಿಳಿಯನಲ್ಲದ ಗಾಂಧಿಯನ್ನು ಕಂಡು ಸಿಟ್ಟು ಬಂದಿತ್ತು. 'ನಿನ್ನ ಹಾಸಿಗೆ ಮತ್ತು ಪೆಟ್ಟಿಗೆಯನ್ನು ತೆಗೆದುಕೊಂಡು ನೇರವಾಗಿ ಮೂರನೇ ದರ್ಜೆಯ ಬೋಗಿಗೆ ಹೋಗು' ಎಂದು ಗಾಂಧಿಗೆ ಆದೇಶಿಸಿದ್ದನು.



ಪಾಪು ಬಾಪು

‘ಇಲ್ಲ. ಪ್ರಥಮ ದರ್ಜೆಯ ಟಿಕೇಟು ಖರೀದಿಸಿರುವ ನಾನು, ಮೂರನೇ ದರ್ಜೆಯ ಗಾಡಿಯಲ್ಲಿ ಪ್ರಯಾಣಿಸುವ ಅಗತ್ಯವಿಲ್ಲ. ಟಿಕೇಟು ಖರೀದಿಸಿರುವ ರೈಲು ಪ್ರಯಾಣಿಕನ ಹಕ್ಕನ್ನು ನೀವು ಕಸಿದುಕೊಳ್ಳಲಾರಿರಿ. ಅದು ಕಾನೂನಿಗೆ ವಿರುದ್ಧ. ನಾನು ಕಾನೂನು ಕಲಿತಿರುವ ಬ್ಯಾರಿಸ್ಟರ್ ಪದವಿ ಪಡೆದಿರುವ ವಕೀಲ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ’ ಎಂದು ಗಾಂಧಿ, ಧೈರ್ಯದಿಂದಲೇ ಉತ್ತರಿಸಿದ್ದರು.

ಆದರೆ, ಆ ಬಿಳಿಯ ಅಧಿಕಾರಿಯು ತನ್ನ ಜೊತೆಗಿದ್ದ ಪೋಲೀಸನ ಸಹಾಯದಿಂದ, ಗಾಂಧಿಯ ಹಾಸಿಗೆಯನ್ನು ಎತ್ತಿ ಬಾಗಿಲಿನಿಂದ ಹೊರಗೆಸೆದಿದ್ದನು. ಮಾತ್ರವಲ್ಲ, ಗಾಂಧಿಯ ರಟ್ಟೆ ಹಿಡಿದು ಅವರನ್ನು ಬಾಗಿಲಿನಿಂದ ಹೊರಗೆ ದಬ್ಬಿದ್ದನು.

ಈ ಘಟನೆಯು ಗಾಂಧಿಯ ಜೀವನದ ಮೇಲೆ ಬಲು ದೊಡ್ಡ ಪರಿಣಾಮ ಬೀರಿತ್ತು. ತನಗೆ ಆಗಿರುವ ಅವಮಾನವನ್ನು ದಕ್ಷಿಣ ಆಫ್ರಿಕಾದ ಭಾರತೀಯರು ಪ್ರತಿದಿನವೂ ಅನುಭವಿಸುತ್ತಿರಬಹುದು.

ತನಗೆ ರೈಲಿನಲ್ಲಿ ಪ್ರಥಮ ದರ್ಜೆಯಲ್ಲಿ ಹೋಗಲು ಬಿಡಲಿಲ್ಲ ಎಂದು ಅಳುತ್ತಾ ಕೂತರೆ, ಮೂರನೇ ದರ್ಜೆಯಲ್ಲೂ ಪ್ರಯಾಣಿಸಲು ಸಾಧ್ಯವಾಗದೆ ಮೈಲುಗಟ್ಟಲೆ ನಡೆದುಕೊಂಡು ಹೋಗುವ ಬಡಜನರು ನಗಬಹುದು.

ತಾನು ವಿರೋಧಿಸಬೇಕಾದದ್ದು ತನಗೊಬ್ಬನಿಗಾದ

ಅವಮಾನವನ್ನಲ್ಲ.

ತನ್ನ ಹೋರಾಟವು ಬರಿಯ ರೈಲಿನ ದರ್ಜೆಗಳ ವ್ಯತ್ಯಾಸದ ಚರ್ಚೆಯಲ್ಲಿ ನಿಲ್ಲಬಾರದು. ಅದು ಸ್ವಾತಂತ್ರ್ಯ ಮತ್ತು ಗುಲಾಮಗಿರಿಗಳ ನಡುವಿನ ಚರ್ಚೆಯಾಗಬೇಕು. ಈ ಚರ್ಚೆ ನಾಳೆಯಿಂದಲೇ ಶುರುವಾಗುವಂತೆ ನಾನು ಪ್ರಯತ್ನ ಪಡಬೇಕು.

ಮರುದಿನವೇ ರೈಲ್ವೇ ಜನರಲ್ ಮ್ಯಾನೇಜರಿಗೆ ರಾತ್ರಿಯ ಘಟನೆಯನ್ನೆಲ್ಲ ವಿವರಿಸಿ ಗಾಂಧಿ ತಂತಿ ಕೊಟ್ಟರು.

ಮುಂದಿನ ರೈಲಿನಲ್ಲಿ ಚಾರ್ಲ್ಸ್‌ಟೌನ್‌ನತ್ತ ಹೊರಟರು.

ಹೋರಾಟದ ಸಾವಿರ ದಿನಗಳು

ಕೇವಲ ಒಂದು ವರ್ಷದ ಪರವಾನಿಗೆಯೊಂದಿಗೆ ದಕ್ಷಿಣ ಅಫ್ರಿಕಾದ ನೆಲದ ಮೇಲೆ ಕಾಲಿಟ್ಟಿದ್ದ ಗಾಂಧಿ, ಹಲವಾರು ವರ್ಷಗಳ ಕಾಲ ಅಲ್ಲಿಯೇ ಉಳಿಯಬೇಕಾದಂತಹ ಹಲವಾರು ಘಟನೆಗಳು, ಒಂದರ ಬೆನ್ನ ಹಿಂದೆ ಇನ್ನೊಂದರಂತೆ ನಡೆದುಹೋಗಿದ್ದವು.

ಗಾಂಧಿ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದದ್ದು, ಅಬ್ದುಲ್ಲಾ ಸೇಠರು ತಮ್ಮ ವ್ಯವಹಾರದಲ್ಲಿ ವಿರೋಧಿಯಾಗಿದ್ದ ತಯ್ಯಬ್ ಸೇಠ್ ಬಣದ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಸಹಾಯಕನಾಗಿ ಕೆಲಸ ಮಾಡಲು. ಹಾಗೆಂದು ಅಬ್ದುಲ್ಲಾ ಸೇಠ್ ಮತ್ತು ಪ್ರತಿವಾದಿ ತಯ್ಯಬ್ ಸೇಠ್ ಬದ್ಧ ವೈರಿಗಳೇನೂ

ಅಲ್ಲ. ಅವರ ನಡುವೆ ತಗಾದೆಯಿದ್ದದ್ದು ಹಣದ ಬಗ್ಗೆ ಮಾತ್ರ. ಅವರಿಬ್ಬರ ಜಗಳದಲ್ಲಿ ಲಾಭವಾಗುತ್ತಿದ್ದದ್ದು ಎರಡೂ ಕಡೆಯ ವಕೀಲರುಗಳಿಗೆ ಮಾತ್ರ.

ನ್ಯಾಯಾಲಯದ ಹೊರಗೆಯೇ ಪಂಚಾಯಿತಿ ನಡೆಸಿ ಇವರಿಬ್ಬರ ನಡುವಿನ ವ್ಯಾಜ್ಯವನ್ನು ಕೊನೆಗೊಳಿಸಬೇಕೆಂಬ ಎಂಬ ಆಸೆ ಗಾಂಧಿಗೆ ಹುಟ್ಟಿತ್ತು. ಗಾಂಧಿಯ ಹಠ ಕೊನೆಗೂ ಗೆದ್ದಿತ್ತು. ತಮ್ಮ ಮೊಕದ್ದಮೆಯು ನ್ಯಾಯಾಲಯದ ಹೊರಗೆಯೇ ಇತ್ಯರ್ಥವಾದ ಬಳಿಕ ಗಾಂಧಿಯ ಕೆಲಸ ಮುಗಿಯಿತೆಂದೇ ಭಾವಿಸಿದ್ದ ಅಬ್ದುಲ್ಲಾ ಸೇಠರು, ಅವರನ್ನು ಅದ್ಧೂರಿಯಾಗಿ ಸನ್ಮಾನಿಸಿ ಭಾರತಕ್ಕೆ ವಾಪಸು ಕಳುಹಿಸುವ ಏರ್ಪಾಡು ಮಾಡಿದ್ದರು.

ಆದರೆ ಸನ್ಮಾನದ ದಿನದಂದು ಸ್ಥಳೀಯ ದಿನಪತ್ರಿಕೆ 'ನೇಟಾಲ್ ಮರ್ಕ್ಯುರಿ'ಯಲ್ಲಿ ಪ್ರಕಟವಾಗಿದ್ದ ಭೀಕರ ಸುದ್ದಿಯೊಂದು, ಗಾಂಧಿಯ ಮರು ಪ್ರಯಾಣದ ದಿನವನ್ನು ಮುಂದೂಡಿತ್ತು. ಸಧ್ಯದಲ್ಲೇ ನಡೆಯಲಿದ್ದ 'ನೇಟಾಲ್' ಚುನಾವಣೆಯಲ್ಲಿ ಭಾರತೀಯರಿಗೆ ಮತದಾನದ ಹಕ್ಕನ್ನು ನಿರಾಕರಿಸಲಿರುವ ವಿಧೇಯಕವೊಂದು ಶಾಸಕಾಂಗದ ಎದುರು ಮಂಡಿಸಲಾಗುತ್ತದೆ ಎಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿತ್ತು. ತಮ್ಮ ಆತಂಕವನ್ನು ಸಮಾರಂಭದಲ್ಲಿ ಸೇರಿದ್ದ ಕೆಲವರಲ್ಲಿ ಹಂಚಿಕೊಂಡದ್ದೇ ತಡ, ಗಾಂಧಿಯ ಮರು ಪ್ರಯಾಣದ ಟಿಕೇಟನ್ನು ರದ್ದುಗೊಳಿಸುವಂತೆ ಹಲವಾರು ಮಂದಿ ಅಬ್ದುಲ್ಲಾ ಸೇಠರನ್ನು ಒತ್ತಾಯಿಸಿದರು.



ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ

ವಾರದೊಳಗೆ ನೇಟಾಲ್‌ನ ರಸ್ತೆಬದಿಯ ಪುಟ್ಟ ಕೋಣೆಯೊಂದರ ಎದುರು, 'ನೇಟಾಲ್ ಇಂಡಿಯನ್ ಕಾಂಗ್ರೆಸ್-ಸ್ಥಾಪನೆ 22.05.1894' ಎಂಬ ಫಲಕ ತೂಗಾಡಿತು. ಬ್ಯಾರಿಸ್ಟರ್ ಮೋಹನದಾಸ ಗಾಂಧಿಯ ಕಾರ್ಯದರ್ಶಿ-ತನದಲ್ಲಿ, ದಕ್ಷಿಣ ಆಫ್ರಿಕಾದ ಭಾರತೀಯರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹೋರಾಟ ಕಲಿಸುವ ಪಾಠಶಾಲೆ ಆರಂಭವಾಯಿತು. 'ನೇಟಾಲ್ ಇಂಡಿಯನ್ ಕಾಂಗ್ರೆಸ್'ಗೆ ಐದು ಷಿಲಿಂಗ್ ಕೊಟ್ಟು ಸದಸ್ಯರಾದ ಮಂದಿ ಸಭೆ ಸೇರಿದ ಮೊದಲ ದಿನವೇ, ಸ್ಥಳೀಯ ಶಾಸನ ಸಭೆಯ ಸ್ಪೀಕರ್‌ಗೆ ತಮ್ಮ ಪ್ರತಿಭಟನೆಯ ತಂತಿ ಹೋಗಿತ್ತು.

'ಸ್ಥಳೀಯರಾಗಿರುವ ಭಾರತೀಯ ಮೂಲ ನಿವಾಸಿಗಳಿಗೆ ಮತದಾನದ ಹಕ್ಕನ್ನು ನಿರಾಕರಿಸುವ ಬಗ್ಗೆ ಶಾಸನಸಭೆಯಲ್ಲಿ ಮಂಡಿಸಲಾಗುವ ವಿಧೇಯಕಕ್ಕೆ ಎಲ್ಲ ಭಾರತೀಯ ಮೂಲ ನಿವಾಸಿಗಳ ವಿರೋಧವಿದೆ. ಆದ್ದರಿಂದ ವಿಧೇಯಕದ



ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ

ಮೇಲಿನ ಚರ್ಚೆಯನ್ನು ಸದ್ಯಕ್ಕೆ ಮುಂದೂಡಬೇಕು.' ಇದು ತಂತಿಯ ಸಂದೇಶ.

ಅನಿರೀಕ್ಷಿತವಾಗಿ ಪ್ರತಿಭಟನೆಯ ರೂಪಧರಿಸಿ ಬಂದ ಸಂದೇಶವನ್ನು ಕಡೆಗಣಿಸುವ ಧೈರ್ಯ ಆ ಸ್ಪೀಕರನಿಗೂ ಇದ್ದಿರಲಾರದು. 'ಚರ್ಚೆಯನ್ನು ಎರಡು ದಿನಗಳ ಕಾಲ ಮುಂದೂಡಲಾಗಿದೆ' ಎಂದು ಬರೆದ ಸ್ಪೀಕರ್ ಪತ್ರ, 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಕಚೇರಿಗೆ ಬಂದೇಬಿಟ್ಟಿತು.

ಗಾಂಧಿಯ ಹೋರಾಟಕ್ಕೆ ಸಂದ ಮೊದಲ ಗೌರವ ಇದು.





ಬಾಪು

ಮರಳಿ ತಾಯ್ನಾಡಿಗೆ

ವಿಶ್ವಕವಿ ರವೀಂದ್ರನಾಥ ಠಾಗೋರರು ಸ್ಥಾಪಿಸಿದ್ದ ಕಲಕತ್ತಾದ 'ಶಾಂತಿನಿಕೇತನ' ಆಶ್ರಮದ ಹೆಬ್ಬಾಗಿಲ ಬಳಿ ಅಂದು ಮುಂಜಾನೆಯಿಂದಲೇ ಜನಜಾತ್ರೆ. ಬೊಂಬಾಯಿಯಲ್ಲಿ ಬಹುದೊಡ್ಡ ಸಮಾರಂಭವನ್ನು ಏರ್ಪಡಿಸಿದ್ದ ಗೋಖಲೆಯವರು, ತಮ್ಮ ಶಿಷ್ಯ ಗಾಂಧಿಗೆ ಭವ್ಯ ಸ್ವಾಗತವನ್ನೇ ಕೋರಿದ್ದರು.

ದಕ್ಷಿಣ ಆಫ್ರಿಕಾದಿಂದ ಬಂದ ಪವಾಡ ಪುರುಷನನ್ನು ನೋಡುವ ಕುತೂಹಲ ಎಲ್ಲರಿಗೂ. ಆದರೆ, ಒಂದು ಸಾಧಾರಣವಾದ ಅಂಗಿ ಮತ್ತು ಪಂಚೆ ತೊಟ್ಟು, ಎಂಟಾಣೆ ಬೆಲೆಯ ಕಾಶ್ಮೀರಿ ಟೋಪಿಯನ್ನು ತಲೆಯ ಮೇಲೆ ಹಾಕಿಕೊಂಡಿದ್ದ ಬಡ ಕೂಲಿಕಾರನೊಬ್ಬನು ಬಂದು

ಎಲ್ಲರೆದುರು ಮುಗುಳ್ನಗುತ್ತಾ ನಿಂತಾಗ ಸೇರಿದ್ದವರಿಗೆಲ್ಲ ನಿರಾಸೆಯಾಗಿತ್ತು.

ಭಾರತದಲ್ಲಿ ಆ ಹೊತ್ತಿಗಾಗಲೇ 'ರಾಷ್ಟ್ರೀಯ ಕಾಂಗ್ರೆಸ್' ಎಂಬ ಪ್ರಗತಿಪರ ಸಂಸ್ಥೆಯೊಂದು ಆರಂಭವಾಗಿತ್ತು. ಬ್ರಿಟಿಷರ ಜತೆ ಸೌಹಾರ್ದ ಸಂಬಂಧವನ್ನು ಇಟ್ಟುಕೊಂಡೇ, ಆ ಸಂಸ್ಥೆಯು ಭಾರತೀಯರ ವಿಕಾಸಕ್ಕಾಗಿ ಸರಕಾರದವರು ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ಮನವಿಗಳನ್ನು ಸಲ್ಲಿಸುವ ಕೆಲಸ ಮಾಡುತ್ತಿತ್ತು.


ಆ ದಿನಗಳಲ್ಲಿ ಶಾಂತಿನಿಕೇತನವು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿತ್ತು. ಶಾಂತಿನಿಕೇತನದ ಮಾದರಿಯಲ್ಲಿ ದೇಶದ ಉದ್ದಗಲಕ್ಕೂ ನೂರಾರು ದೇಶಪ್ರೇಮದ ಹಣತೆಗಳು ಬೆಳಗುತ್ತಿದ್ದವು. ದೇಶದ ಉತ್ತರ ಭಾಗದಲ್ಲಿ ಮಹಾತ್ಮ ಮುನ್ಷಿರಾಮರು (ಶ್ರದ್ಧಾನಂದ ಸ್ವಾಮಿಗಳು) ಸ್ಥಾಪಿಸಿದ್ಧ ಗುರುಕುಲದವರು, ರಾಮಕೃಷ್ಣ ಮಠದವರು, ಬ್ರಹ್ಮ ಸಮಾಜದ ರಾಜಾರಾಮ ಮೋಹನರಾಯರು, ದೇವೇಂದ್ರನಾಥ ಠಾಕೂರರು, ಕೇಶವ ಚಂದ್ರಸೇನ ಮೊದಲಾದವರು ಜನರಿಗೆ ಪ್ರಗತಿಯ ಮಾರ್ಗದರ್ಶನ ಮಾಡುತ್ತಿದ್ದರು. ದಕ್ಷಿಣದಲ್ಲಿ ಅನಿಬೆಸೆಂಟರ ಥಿಯಾಸಫಿ ಕೇಂದ್ರ ಮತ್ತು ಅದರ ಜತೆಗೆ ನಾರಾಯಣಗುರು ಸಮಾಜದ ಕಾರ್ಯಕರ್ತರು ಸಾಮಾಜಿಕ ಪರಿವರ್ತನೆಗಾಗಿ ಕೆಲಸ ಮಾಡುತ್ತಿದ್ದರು.

ಲೋಕಮಾನ್ಯ ಬಾಲಗಂಗಾಧರ ತಿಲಕರು, 'ಸ್ವರಾಜ್ಯವು

ನಮ್ಮ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದರೆ, 'ನಾವದನ್ನು ಪಡೆದೇ ತೀರುತ್ತೇವೆ' ಎಂಬುದಾಗಿ ಅರವಿಂದ ಘೋಷ್, ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ ರಾಯ್ ಮೊದಲಾದ ದೇಶನಾಯಕರು ಧ್ವನಿಗೂಡಿಸುತ್ತಿದ್ದರು.

ತಾನೂ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಬೇಕು; ಭಾರತದ ಜನರ ಒಳಿತಿಗಾಗಿ ಕೆಲಸ ಮಾಡಬೇಕು; ದಕ್ಷಿಣ ಆಫ್ರಿಕಾದಲ್ಲಿ ಜನರ ನಡುವೆ ತಾನು ಕಲಿತ ಅನುಭವಗಳನ್ನು ಇಲ್ಲಿಯೂ ಬಳಸಿಕೊಳ್ಳಬೇಕು ಎಂಬ ಉತ್ಸಾಹ ಗಾಂಧೀಜಿಗೆ ಮೂಡಿತ್ತು. ಆದರೆ, ಗಾಂಧೀಜಿಗೆ ರಾಜಕೀಯದ ಬಾಲಪಾಠ ಮಾಡಿದ್ದ ಗುರು ಗೋಪಾಲಕೃಷ್ಣ ಗೋಖಲೆಯವರು, ಗಾಂಧೀಜಿಯನ್ನು ಬೊಂಬಾಯಿಯಿಂದ ಬೀಳ್ಕೊಡುವಾಗ, ಖಡಾಖಂಡಿತವಾದ ಆದೇಶ ನೀಡಿದ್ದರು.

'ನಿನಗೆ ನಾನು ಒಂದು ವರ್ಷದ ಕಾಲದ ಪರೀಕ್ಷೆ ನಿಗದಿಗೊಳಿಸಿರುವೆ. ನೀನು ಮೊದಲು ಭಾರತದ ಉದ್ದಗಲಕ್ಕೂ ಸಂಚಾರ ಮಾಡಿ, ಇಲ್ಲಿಯ ಜನರ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು. ಈ





ಪಾಪು ಬಾಪು

ಒಂದು ವರ್ಷದ ಪರೀಕ್ಷಾ ಕಾಲದಲ್ಲಿ ನೀನು ಯಾವುದೇ ಸಾರ್ವಜನಿಕ ಭಾಷಣ ಮಾಡಬಾರದು. ಯಾವುದೇ ಅಭಿಪ್ರಾಯವನ್ನು ಸಾರ್ವಜನಿಕವಾಗಿ ಪ್ರಕಟಿಸಬಾರದು. ಯಾವುದೇ ಸಾರ್ವಜನಿಕ ಪ್ರಶ್ನೆಗಳಿಗೆ ನೀನು ಉತ್ತರ ನೀಡಬಾರದು.'

ಗಾಂಧೀಜಿಯವರು ಸರಿ ಎಂದರು; ಪ್ರವಾಸ ಹೊರಟರು.

ಕುಂಭಮೇಳ

ಆ ವರ್ಷದಲ್ಲಿ ಹರಿದ್ವಾರದಲ್ಲಿ ಕುಂಭಮೇಳ ನಡೆಯಲಿರುವುದು ಗಾಂಧೀಜಿಗೆ ಗೊತ್ತಿತ್ತು. ಕಲಕತ್ತಾದಿಂದ ಹರಿದ್ವಾರದವರೆಗೆ ಬಲು ಪ್ರಯಾಸದ ರೈಲು ಪ್ರಯಾಣ. ಸಹರನ್ಪುರದಿಂದ ಮುಂದಕ್ಕೆ ಮೇಲ್ಛಾವಣಿಯಿಲ್ಲದ ರೈಲು ಬೋಗಿಗಳಲ್ಲಿ ಪ್ರಯಾಣಿಕರನ್ನು ಜಾನುವಾರುಗಳಂತೆ ತುಂಬಿಸಲಾಗುತ್ತಿತ್ತು.

ಧರ್ಮವನ್ನು ಹುಡುಕುತ್ತಾ ಯಾತ್ರಾ ಸ್ಥಳಗಳಿಗೆ ಹೋಗುವುದನ್ನು ಇಷ್ಟಪಡುವವರಲ್ಲ ಗಾಂಧೀಜಿ. ಕುಂಭಮೇಳದಲ್ಲಿ ಸಾಧುಗಳಿದ್ದರು. ಸನ್ಯಾಸಿಗಳಿದ್ದರು. ಗೃಹಸ್ಥರಿದ್ದರು. ಮದುವಣಿಗರಿದ್ದರು. ವಿಧವೆಯರಿದ್ದರು, ಮಕ್ಕಳಿದ್ದರು. ಕಳ್ಳರಿದ್ದರು. ಸುಳ್ಳರಿದ್ದರು. ಯಾತ್ರಿಕರಿದ್ದರು. ಪ್ರವಾಸಿಕರಿದ್ದರು. ಗುಂಪು ಗದ್ದಲಗಳಲ್ಲಿಯೇ ಸಂತಸ ಕಾಣಲು ಬಂದ ಸುಖಜೀವಿಗಳಿದ್ದರು.

ಅಲ್ಲಿ ಕೊಳಕು ಇತ್ತು, ಆಲಸ್ಯ ಇತ್ತು, ಬೂಟಾಟಿಕೆ ಇತ್ತು, ಕುರುಡು ನಂಬಿಕೆ ಇತ್ತು. ಸತ್ತ ಮಗುವಿನ ಹೆಣದ ಮೇಲೆ ಬಟ್ಟೆ ಹಾಸಿ ಶವಸಂಸ್ಕಾರಕ್ಕೆ ಸಹಾಯಮಾಡಿ ಎಂದು ಕಣ್ಣೀರಿಟ್ಟು ಗೋಗರೆಯುವ ನಿಜವಾದ ತಾಯಿ ಇದ್ದಳು. ಕರುವಿನ ಕಾಲು ಕತ್ತರಿಸಿ ಅದನ್ನು ಬೇರೊಂದು ಜೀವಂತ ದನದ ಕಾಲುಗಳ ನಡುವೆ ಅಂಟಿಸಿ, ಐದು ಕಾಲಿನ ಪವಿತ್ರ ಗೋವು ಎಂದು ಪ್ರದರ್ಶಿಸಿ ಮುಗ್ಧ ಭಾವುಕರ ಹಣ ದೋಚುವ ಸುಲಿಗೆಕೋರರೂ ಇದ್ದರು.

ಅಲ್ಲಿ ಇಲ್ಲದಿದ್ದದ್ದು ಸ್ವಚ್ಛತೆ ಮಾತ್ರ

ಭಗವಂತನು ದಾರಿಯುದ್ದಕ್ಕೂ ನಿರ್ಮಿಸಿದ್ದ ಪ್ರಕೃತಿ ಸೌಂದರ್ಯಕ್ಕೆ ಸರಿಸಾಟಿಯಾಗಿ, ಅದೇ ಭಗವಂತನ ಮಕ್ಕಳು ಅದೇ ದಾರಿಯುದ್ದಕ್ಕೂ ಪ್ರಕೃತಿ ಕರೆಗೆ ಓಗೊಡುತ್ತಾ ಕುಳಿತುಕೊಂಡಿರುತ್ತಿದ್ದ ದೃಶ್ಯವನ್ನು ಕಂಡು ಗಾಂಧೀಜಿ ಬಹಳವಾಗಿ ಮರುಗಿದರು. ಭಾರತದ ನಿಜವಾದ ಸುಧಾರಣೆಯು ಕಕ್ಕಸುಗುಂಡಿಯಿಂದಲೇ ಆರಂಭವಾಗಬೇಕು ಎಂಬುದು ಗಾಂಧೀಜಿಗೆ ಅರ್ಥವಾಗಿತ್ತು.

ಹೃಷಿಕೇಶದಲ್ಲಿ ಉಳಿದುಕೊಂಡಿದ್ದ ದಿನಗಳಲ್ಲಿ ಗಾಂಧೀಜಿಯು, ಹಲವಾರು ಧಾರ್ಮಿಕ ನಾಯಕರೊಡನೆ ಭಾರತೀಯ ಸಂಸ್ಕೃತಿಯ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಒಂದು ಮುಂಜಾನೆ ಗಂಗಾನದಿಯಲ್ಲಿ ಸ್ನಾನ ಮುಗಿಸಿಕೊಂಡು ಗಾಂಧೀಜಿ ಮರಳುತ್ತಿದ್ದಾಗ ಅವರು ಅಂಗಿ

ತೊಟ್ಟಿರಲಿಲ್ಲ. ತಲೆ ಬರಿದಾಗಿತ್ತು. ಗಾಂಧೀಜಿಯ ತಲೆಯಲ್ಲಿ ಜುಟ್ಟು ಇರಲಿಲ್ಲ! ಭುಜದಲ್ಲಿ ಜನಿವಾರ ಇರಲಿಲ್ಲ! ಅದನ್ನು ಕಂಡ ಜನರೆಲ್ಲ ದಂಗಾಗಿಬಿಟ್ಟಿದ್ದರು!

ಮಾತುಕತೆ ಮತ್ತು ಚರ್ಚೆಯ ಸಂದರ್ಭಗಳಲ್ಲಿ, ಹಿಂದೂ ಧಾರ್ಮಿಕ ವಿಷಯಗಳ ಬಗ್ಗೆ ಆಳವಾದ ಶ್ರದ್ಧೆಯನ್ನು ಪ್ರಕಟಿಸುತ್ತಿದ್ದ ಗಾಂಧೀಜಿಯ ದೇಹದಲ್ಲಿ, ಹಿಂದೂ ಆಸ್ತಿಕನೊಬ್ಬನು ಪ್ರದರ್ಶಿಸಲೇಬೇಕಾಗಿದ್ದ ಯಾವುದೇ ಗುರುತುಗಳಿಲ್ಲದಿರುವುದನ್ನು ಕಣ್ಣಾರೆ ಕಂಡರೂ ನಂಬಲು ಕಷ್ಟವಾಗಿತ್ತು!

ಜನಿವಾರ ಧರಿಸಿದ ತಮ್ಮ ಬಗ್ಗೆ ಆಕ್ಷೇಪಿಸಿದವರನ್ನು, 'ಆತ್ಮೋದ್ಧಾರದ ಪ್ರತೀಕವಾಗಿರುವ ಪವಿತ್ರವಾದ ಜನಿವಾರವನ್ನು ಜಾತಿಯೊಂದರ ಸಮವಸ್ತ್ರವಾಗಿ ಪ್ರದರ್ಶಿಸುವುದು ನನಗೆ ಇಷ್ಟವಿಲ್ಲ' ಎಂದು ಸ್ಪಷ್ಟವಾಗಿ ಹೇಳಿ ಬಾಯಿ ಮುಚ್ಚಿಸಿದ್ದರು ಗಾಂಧೀಜಿ.

ಸತ್ಯಾಗ್ರಹ ಆಶ್ರಮ

ಗಾಂಧೀಜಿ ಹೃಷಿಕೇಶದಿಂದ ಮರಳುತ್ತಿರುವಾಗಲೇ ಮುಂದೇನು ಮಾಡಬೇಕು ಎಂಬುದನ್ನು ನಿರ್ಧರಿಸಿಬಿಟ್ಟಿದ್ದರು. ಕೆಲವೇ ದಿನಗಳೊಳಗೆ, ಬ್ಯಾರಿಸ್ಟರ್ ಜೀವನ ಲಾಲ ದೇಸಾಯಿಯವರ 'ಕೊಚರಾಬ್' ಬಂಗಲೆಯಲ್ಲಿ, ಹದಿಮೂರು ಮಂದಿ ತಮಿಳರನ್ನು ಒಳಗೊಂಡಂತೆ, ದೇಶದ ನಾಲ್ಕೂ ಮೂಲೆಗಳಿಂದ ಬಂದಿದ್ದ ಇಪ್ಪತ್ತೈದು ಮಂದಿಗಳ

ತುಂಬು ಕುಟುಂಬವು ಹೊಸ ಬದುಕು ಆರಂಭಿಸಿತು. ಅದುವೇ 'ಸತ್ಯಾಗ್ರಹ ಆಶ್ರಮ.'


ಅಲ್ಲಿದ್ದದ್ದು ಒಂದೇ ಒಲೆ. ಒಂದೇ ಅಡುಗೆ. ಒಂದೇ ಗುರಿ. ವೆಚ್ಚದ ಹಣಕ್ಕೆ ತೊಂದರೆಯಿಲ್ಲ; ದಾನಿಗಳಿದ್ದಾರೆ.

ಆಡಳಿತದ ವ್ಯವಹಾರಗಳನೆಲ್ಲ ನೋಡಿಕೊಳ್ಳಲು ಮಗನ್‌ಲಾಲ ಇದ್ದಾನೆ. ಎಲ್ಲವೂ ಸಲೀಸಾಗಿ ಸಾಗುತ್ತಿದೆ. ಗಾಂಧೀಜಿಗೆ ನಿಶ್ಚಿಂತೆಯಾಗಿತ್ತು.

ಆದರೆ, ಒಂದು ದಿನ ಥಕ್ಕರ್ ಬಾಬಾರ ಪತ್ರವೊಂದನ್ನು ಹಿಡಿದುಕೊಂಡು ಬಂದಿದ್ದ ಕುಟುಂಬವೊಂದು, 'ಸತ್ಯಾಗ್ರಹ ಆಶ್ರಮ'ದ ಬಾಗಿಲ ಬಳಿ ನಿಂತು, ನಮ್ಮನ್ನೂ ನಿಮ್ಮ ಜತೆಗೆ ಸೇರಿಸಿಕೊಳ್ಳಿ' ಎಂದು ಪ್ರಾರ್ಥಿಸಿತು. ಹೊಸದಾಗಿ ಬಂದವರು



ಗಾಂಧೀಜಿಯವರ ಸಾಬರಮತಿ ಆಶ್ರಮ



ಮೂವರು; ಮುಂಬಯಿಯಲ್ಲಿ ಶಿಕ್ಷಕರಾಗಿದ್ದ ದುದಾಭಾಯಿ, ಅವರ ಹೆಂಡತಿ ದಾನೀಬೆಹನ್ ಮತ್ತು ಅವರ ಪುಟ್ಟ ಮಗು ಲಕ್ಷ್ಮಿ. ಆದರೆ, ಅವರು ಜಾತಿಯಲ್ಲಿ ಅಸ್ಪೃಶ್ಯರೆಂದು ಪರಿಗಣಿತರಾಗಿದ್ದವರು.

ಗಾಂಧೀಜಿಯ ನಿಲುವುಗಳಿಗಾಗ ಅಗ್ನಿಪರೀಕ್ಷೆ. ಆಶ್ರಮವಾಸಿಗಳದ್ದೇನೂ ತಕರಾರು ಇದ್ದಿರಲಿಲ್ಲ.

ಆಶ್ರಮದ ಬಾವಿಯ ಪಕ್ಕದಲ್ಲೇ, ಆಶ್ರಮಕ್ಕಾಗಿ ಬಂಗಲೆಯನ್ನು ಬಾಡಿಗೆಗೆ ಕೊಟ್ಟಿದ್ದ ಯಜಮಾನನ ಮನೆ ಇತ್ತು. ಆ ಮನೆಗೆ ನೀರು ಎತ್ತಿ ಒಯ್ಯುವ ಆಳಿಗೆ, ಅಸ್ಪೃಶ್ಯನಾಗಿದ್ದ ದುದಾಭಾಯಿ ಅದೇ ಬಾವಿಯಿಂದ ನೀರೆತ್ತುವುದನ್ನು ನೋಡಿ ಸಹಿಸಲಾಗಲಿಲ್ಲ. ತನಗೆ ಗೊತ್ತಿರುವ ಎಲ್ಲ ಬೈಗುಳವನ್ನೂ ಪ್ರಯೋಗಿಸಿ ದುದಾಭಾಯಿಗೆ ಅವಮಾನ ಮಾಡಿದ್ದ. ಆದರೆ, ದುದಾಭಾಯಿ ಮಾತ್ರ ತುಟಿ ಎರಡು ಮಾಡದಿದ್ದಾಗ ಅವನಿಗೆ ಅಚ್ಚರಿಯಾಗಿತ್ತು. ಮನುಷ್ಯರಲ್ಲಿ ಇಷ್ಟೊಂದು ತಾಳ್ಮೆಯಿರುವ ಜಾತಿಯವರೂ ಇರುತ್ತಾರೋ ಎಂಬ ಯೋಚನೆಯಿಂದ ನಾಚಿಕೆಯೆನ್ನಿಸಿ ಸುಮ್ಮನಾಗಿಬಿಟ್ಟಿದ್ದ.

ಅವನೇನೋ ಸುಮ್ಮನಾಗಿಬಿಟ್ಟಿದ್ದ. ಆದರೆ, ಆಶ್ರಮಕ್ಕೆ ದಾನ ನೀಡುತಿದ್ದವರು ಮಾತ್ರ ಸುಮ್ಮನಿರಲು ಸಿದ್ಧರಿರಲಿಲ್ಲ. ಹಣದ ನೆರವು ನಿಲ್ಲಿಸುವುದರ ಜತೆಗೆ ಆಶ್ರಮವಾಸಿಗಳಿಗೆಲ್ಲ 'ಸಾಮಾಜಿಕ ಬಹಿಷ್ಕಾರ' ಹಾಕುವ ಮಾತುಗಳೂ ಕೇಳಿಸತೊಡಗಿದ್ದವು.

'ದಾನಿಗಳು ಹಣದ ನೆರವು ನಿಲ್ಲಿಸಿದರೆ ಹೆದರಬಾರದು.



ಪಾಪು ಬಾಪು

ಆಶ್ರಮವಾಸಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ ಮಾತ್ರಕ್ಕೆ ತಾವು ಸೋಲೊಪ್ಪಿ ಕೊಳ್ಳಬಾರದು. ಅಸ್ಪೃಶ್ಯ ಕುಟುಂಬವೊಂದು ಆಶ್ರಮಕ್ಕೆ ಸೇರಿಕೊಂಡ ಕಾರಣಕ್ಕೆ, ಆಶ್ರಮವನ್ನೇ ಬಹಿಷ್ಕರಿಸ ಬಯಸುವ ಸಮಾಜವನ್ನು ತಾವೇ ಮೊದಲು ಬಹಿಷ್ಕರಿಸಬೇಕು. ಅಸ್ಪೃಶ್ಯರ ಕೇರಿಗೇ ಆಶ್ರಮವನ್ನು ಸ್ಥಳಾಂತರಿಸಿ, ಅಲ್ಲಿ ಕೂಲಿ ಮಾಡಿ ಬದುಕಬೇಕು' ಎಂದು ಗಾಂಧೀಜಿ ನಿರ್ಧರಿಸಿದರು.

ಆದರೆ, ವಾರ ದಾಟುವಷ್ಟರಲ್ಲಿ ಅಹಮದಾಬಾದಿನ ಶ್ರೀಮಂತ ಉದ್ಯಮಿ ಅಂಬಾಲಾಲ ಸಾರಾಭಾಯಿಯವರು ಹದಿಮೂರು ಸಾವಿರ ರೂಪಾಯಿಗಳನ್ನು ಗಾಂಧೀಜಿಯ ಕೈಯಲ್ಲಿರಿಸಿದ್ದರು. ಸಬರಮತೀ ನದೀತೀರಕ್ಕೆ ಸ್ಥಳಾಂತರಗೊಂಡ 'ಸತ್ಯಾಗ್ರಹ ಆಶ್ರಮ' ಹೊಸ ಉತ್ಸಾಹದಿಂದ ಕೆಲಸ ಮಾಡತೊಡಗಿತು. ಶಾಂತಿ ನಿಕೇತನದಿಂದ ಆಚಾರ್ಯ ಕಾಕಾ ಕಾಲೇಲ್ಕರ್ ಬಂದರು. ಗುಜರಾತಿನಿಂದ ಶಂಕರಲಾಲ ಬ್ಯಾಂಕರ್, ಮಹದೇವ ದೇಸಾಯಿ, ವಿದ್ವಾಂಸ ಕಿಶೋರಿಲಾಲ ಮಶ್ರುವಾಲ ಹೀಗೆ ಒಬ್ಬೊಬ್ಬರಾಗಿ ಬಂದು ಆಶ್ರಮ ಸೇರಿದರು.

ಆಶ್ರಮಕ್ಕೆ ಮೂರು ಬೊಂಬೆ ಮಂಗಗಳೂ ಬಂದು ಕೂತವು.

ಒಂದು ಮಂಗವು, 'ಕೆಟ್ಟದ್ದನ್ನು ನೋಡದಿರಿ' ಎಂದು ಹೇಳುವಂತೆ ತನ್ನ ಎರಡೂ ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಂಡು ಕುಳಿತಿದ್ದರೆ, ಎರಡನೆಯ ಬೊಂಬೆಮಂಗವು



ತನ್ನೆರಡೂ ಕಿವಿಗಳನ್ನು ಮುಚ್ಚಿಕೊಂಡು, 'ಕೆಟ್ಟದ್ದನ್ನು ಕೇಳದಿರಿ' ಎಂದು ಸಾರುತ್ತಿತ್ತು. ಮೂರನೆಯ ಬೊಂಬೆಮಂಗವು ತನ್ನ ಕೈಗಳಿಂದ ಬಾಯಿಯನ್ನು ಮುಚ್ಚಿಕೊಂಡು 'ಕೆಟ್ಟದ್ದನ್ನು ಹೇಳದಿರಿ' ಎಂದು ಸೂಚಿಸುತ್ತಿತ್ತು.

ಸತ್ಯ, ಅಹಿಂಸೆ, ನಿರ್ಭಯತೆ, ಸಂಯಮದ ಜೀವನ, ಸಚ್ಚಾರಿತ್ರ್ಯ, ಸರ್ವಧರ್ಮ ಸಮಭಾವ, ಶ್ರಮನಿಷ್ಠೆ, ಸ್ವದೇಶೀ ವ್ರತ, ಅಸ್ಪೃಶ್ಯತೆಯ ನಿವಾರಣೆ, ಅಸ್ವಾದ, ಅಸಂಗ್ರಹ ಹೀಗೆ ಈ ಹನ್ನೊಂದು ಬಗೆಯ ಸೂತ್ರಗಳು 'ಸತ್ಯಾಗ್ರಹ ಆಶ್ರಮ'ದ ನಿತ್ಯ ಜಪಗಳಾದವು.

ಕಟ್ಟಕಡೆಯವನಿಗೆ ಬದುಕುವ ಹಕ್ಕು ಮತ್ತು ಸೌಲಭ್ಯಗಳನ್ನು ಪಡೆಯಲು ಅಹಿಂಸೆಯೊಂದೇ ಬ್ರಹ್ಮಾಸ್ತ್ರ. ಬ್ರಿಟಿಷರ

ಗುಲಾಮತನದಿಂದ ಮುಕ್ತಿ ಪಡೆಯಬೇಕಾದರೆ ಮೊದಲು ವಿದೇಶೀಯರ ಯಂತ್ರಗಳಿಂದ ಮುಕ್ತಿ ಪಡೆಯಬೇಕು. ಗ್ರಾಮೋದ್ಯೋಗವೊಂದೇ ಮಂತ್ರವಾಗಬೇಕು. ಆಶ್ರಮವಾಸಿಗಳೆಲ್ಲರೂ ಕಡ್ಡಾಯವಾಗಿ ಭಾರತದ ಗಿರಣಿಗಳಲ್ಲಿ ತಯಾರಾದ ನೂಲಿನಿಂದ ತಯಾರಾದ ಕೈಮಗ್ಗದ ವಸ್ತ್ರಗಳನ್ನೇ ಧರಿಸಬೇಕು. ದೇಶೀಯ ಕೈಮಗ್ಗದ ಅಭಿವೃದ್ಧಿಯಾಗಬೇಕು. ಹೀಗೆ, ಗ್ರಾಮಾಭಿಮುಖವಾದ ಸರ್ವೋದಯ ಸಮಾಜ ರಚನೆಯ ಮೊದಲ ಪಾಠಗಳು 'ಸತ್ಯಾಗ್ರಹ ಆಶ್ರಮ'ದಲ್ಲಿ ಪ್ರಾರಂಭವಾದವು.

ಚರಕಾ

ಗಾಂಧೀಜಿಗೆ ತಮ್ಮ ದೇಶೀಯ ವಸ್ತ್ರದ ಚಳುವಳಿಯಲ್ಲಿ 'ಚರಕಾ'ವನ್ನು ಸ್ವಾವಲಂಬನೆಯ ಸಂಕೇತವನ್ನಾಗಿ ಬಳಸಿಕೊಳ್ಳಬೇಕು ಎಂಬ ಆಸೆಯಿತ್ತು. ಬರೋಡಾದ ವಿಜಾಪುರ ಗ್ರಾಮದಲ್ಲಿರುವ ಎಲ್ಲ ಚರಕಾಗಳನ್ನೂ ಗಾಂಧೀಜಿ ಅಟ್ಟದಿಂದ ಭೂಮಿಗಿಳಿಸಿದರು. ಅಲ್ಲಿಯ ನೇಕಾರರಿಗೆ ತಮ್ಮ ಗೆಳೆಯ ಉಮರ ಸೋಬಾನಿಯವರ ಗಿರಣಿಯಲ್ಲಿ 'ಹಿಂಜಿದ ಹತ್ತಿ'ಯನ್ನು ರವಾನಿಸಿದರು. ವಿಜಾಪುರದಲ್ಲಿ ಚರಕಾಗಳು ತಿರುಗಲಾರಂಭಿಸಿದವು. ನೇಕಾರರು ನೂತ ನೂಲು, 'ಸತ್ಯಾಗ್ರಹ ಅಶ್ರಮದ' ಕೈಮಗ್ಗದ ರಾಟೆಗಳಲ್ಲಿ ಬಟ್ಟೆಯಾಯಿತು.

ದಿನಗಳೆದಂತೆ ಗಾಂಧೀಜಿಯ ಸತ್ಯಾಗ್ರಹದ ತೋಳುಗಳು



ಆಶ್ರಮದ ಹೊರಗೆಯೂ ಚಾಚತೊಡಗಿದವು. ಬಿಹಾರದ ಚಂಪಾರಣ್ಯದ ರೈತನಾಗಿದ್ದ ರಾಜಕುಮಾರ ಶುಕ್ಲಾ ಎಂಬವರ ಒತ್ತಾಯಕ್ಕೆ ಕಟ್ಟುಬಿದ್ದ ಗಾಂಧೀಜಿ ಚಂಪಾರಣ್ಯಕ್ಕೆ ಹೋದರು. ಅಲ್ಲಿ ಅಹಿಂಸಾತ್ಮಕ 'ಸತ್ಯಾಗ್ರಹ'ದ ಮೂಲಕ ಚಂಪಾರಣ್ಯದಲ್ಲಿನ ನೀಲಿಬೆಳೆಯ ರೈತರಿಗೆ ನ್ಯಾಯವಾದ ಹಕ್ಕುಗಳನ್ನು ದೊರಕಿಸಿಕೊಟ್ಟರು.

ಚಂಪಾರಣ್ಯದ ಗೆಲುವಿನ ಕತೆ ದೇಶಾದ್ಯಂತ ಸಂಚಲನ ಮೂಡಿಸಿತು. ದೇಶಾದ್ಯಂತ ಸತ್ಯಾಗ್ರಹ ಸಭೆಗಳು ನಡೆಯಲಾರಂಭಿಸಿದವು.

ಜಲಿಯನ್ವಾಲಾ ಬಾಗ್ ಮೈದಾನದಲ್ಲಿ ಸಭೆಯೊಂದು ನಡೆಯುತ್ತಿದ್ದಾಗ, ಬ್ರಿಟಿಷರ ಸೈನ್ಯಾಧಿಕಾರಿ ಜನರಲ್ ಡಾಯರ್ ಎಂಬವನು ನಿರಾಯುಧರಾದ ಜನರ ಮೇಲೆ ಗುಂಡಿನ ಮಳೆಗರೆಯುವಂತೆ ಸೈನಿಕರಿಗೆ ಆದೇಶ ನೀಡಿದ್ದನು. ಗಂಡಸರು, ಹೆಂಗಸರು, ಮುದುಕರು ಮಕ್ಕಳೆನ್ನದೆ ಸುಮಾರು ನಾಲ್ಕು ನೂರಕ್ಕಿಂತಲೂ ಹೆಚ್ಚು ಸತ್ಯಾಗ್ರಹಿಗಳು ಸೈನಿಕರ ಗುಂಡಿಗೆ ಆಹುತಿಯಾದರು; ಹುತಾತ್ಮರಾದರು.

ಕಟ್ಟುವೆವು ನಾವು

ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ದೇಶಕ್ಕೆ ದೇಶವೇ ಪ್ರತಿಭಟಿಸಿತು. ಗಾಂಧೀಜಿಯವರು, ತಮಗೆ ಬ್ರಿಟಿಷರು ನೀಡಿದ್ದ 'ಕೈಸರ್–ಇ–ಹಿಂದ್' ಪದಕವನ್ನು ಮರಳಿಸಿದರು. ತಾವೇ ಸಂಪಾದಿಸುತ್ತಿದ್ದ 'ಯಂಗ್



ಇಂಡಿಯಾ' ಮತ್ತು 'ನವಜೀವನ' ಪತ್ರಿಕೆಗಳಲ್ಲಿ, ತಮ್ಮ ಅಹಿಂಸಾತ್ಮಕ ಸತ್ಯಾಗ್ರಹದ ಮಹತ್ವವನ್ನು ಸಾರುವ ಲೇಖನಗಳನ್ನು ಬರೆದು, ಜನರನ್ನು ನಾಡು ಕಟ್ಟುವ ಕೆಲಸಕ್ಕೆ ಸಿದ್ಧಪಡಿಸತೊಡಗಿದರು.

ಊರು ಕೇರಿಗಳು, ಸಂತೆ ಮಾಳಗಳು, ಬಸ್-ರೈಲು ನಿಲ್ದಾಣಗಳು, ಗಾಂಧೀಜಿಯು ಪ್ರತಿಪಾದಿಸುವ 'ಸತ್ಯಾಗ್ರಹ'ದ ಮಹತ್ವವನ್ನು ಕಲಿಸುವ ತರಗತಿಗಳಾದವು. ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳ ಜತೆ ಅಧ್ಯಾಪಕರೂ ಅಸಹಕಾರ ಚಳುವಳಿಯ ನಾಯಕತ್ವ ವಹಿಸತೊಡಗಿದರು. ದೇಶದ ಹಲವು ಮಹಾನಗರಗಳಲ್ಲಿ ಸ್ಥಳೀಯವಾಗಿ ನಡೆದ ಚುನಾವಣೆಗಳಲ್ಲಿ ಜನಸೇವಕರು ಗೆದ್ದು ಬರತೊಡಗಿದರು.

ಕಲಕತ್ತಾದಲ್ಲಿ ದೇಶಬಂಧು ಸಿ.ಆರ್. ದಾಸ್, ಬೊಂಬಾಯಿಯಲ್ಲಿ ವಿಠಲಭಾಯಿ ಪಟೇಲ್, ಅಹಮದಾಬಾದಿನಲ್ಲಿ ವಲ್ಲಭಭಾಯಿ ಪಟೇಲ್, ಪಾಟ್ನಾದಲ್ಲಿ ಬಾಬು ರಾಜೇಂದ್ರ ಪ್ರಸಾದ್, ಅಲಹಾಬಾದಿನಲ್ಲಿ ಜವಾಹರಲಾಲ್ ನೆಹರೂ ಜನನಾಯಕರಾಗಿ ಮೂಡಿ ಬಂದರು.

ಇಂತಹ ನೂರಾರು ಹಿರಿಯ ವಕೀಲರುಗಳ ಬೆನ್ನಹಿಂದೆ ಸಾವಿರಾರು ವಕೀಲರುಗಳು, ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಅಸಹಕಾರ ಚಳುವಳಿಯ ನೇತೃತ್ವ ವಹಿಸಿದರು. ಸುಭಾಸ್ ಚಂದ್ರ ಬೋಸ್, ಸರೋಜಿನಿ ನಾಯ್ಡು, ಲಾಲಾ ಲಜಪತರಾಯ್, ಖಾನ್ ಅಬ್ದುಲ್ ಗಫಾರ್ ಖಾನ್, ಮೌಲಾನ ಅಬ್ದುಲ್ ಕಲಾಮ್ ಅಜಾದ್, ಅಸಫಾಲಿ, ಹಕೀಮ್ ಅಜಮಲ್ ಖಾನ್, ಡಾ. ನ. ಸು. ಹರ್ಡಿಕರ್, ಚಿತ್ತರಂಜನದಾಸ್, ಹೀಗೆ ನೂರಾರು ಗಣ್ಯರು ಗಾಂಧೀಜಿಯ ಸತ್ಯಾಗ್ರಹಕ್ಕೆ ಬೆಂಬಲವಾಗಿ ನಿಂತರು.

ಗಾಂಧೀಜಿಯ ಜನಪ್ರಿಯತೆಯನ್ನು ನಿಯಂತ್ರಿಸದೆ ಹೋದರೆ, ತಮ್ಮ ಸಿಂಹಾಸನ ಉರುಳುವುದು ಖಂಡಿತವೆಂಬುದು ಬ್ರಿಟಿಷರಿಗೆ ಮನದಟ್ಟಾಗಿತ್ತು. ಗಾಂಧೀಜಿಯನ್ನು ಬಂಧಿಸಿ ಸ್ವಲ್ಪ ಕಾಲವಾದರೂ ಜನರಿಂದ ದೂರ ಮಾಡುವ ಅವಕಾಶಕ್ಕಾಗಿ ಅವರು ಚಾತಕ ಪಕ್ಷಿಯಂತೆ ಕಾಯುತ್ತಿದ್ದರು.



ಜೈಲುವಾಸ

ಗೋರಖ್ಪುರಕ್ಕೆ ಸಮೀಪದಲ್ಲಿದ್ದ ಚೌರಿಚೌರಾ ಎಂಬ ಊರಿನಲ್ಲಿ ಸತ್ಯಾಗ್ರಹಿಗಳ ಗುಂಪೊಂದು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟಿತ್ತು. ಶಾಂತವಾಗಿಯೇ ಸಾಗುತ್ತಿದ್ದ ಮೆರವಣಿಗೆಯನ್ನು ಪೋಲೀಸನೊಬ್ಬ ಕೆಣಕಿದ್ದರಿಂದ ಜನರು ರೊಚ್ಚಿಗೆದ್ದು ಬಿಟ್ಟಿದ್ದರು. ಅತಿಯಾದ ಆವೇಶದ ಹುಚ್ಚಿನಲ್ಲಿ ಪೋಲಿಸ್ ಸ್ಟೇಶನ್ನಲ್ಲಿದ್ದ ಇಪ್ಪತ್ತೆಂಟು ಪೋಲೀಸರನ್ನು ಬೆಂಕಿಯಲ್ಲಿ ಸುಟ್ಟುಹಾಕಿಬಿಟ್ಟಿದ್ದರು.

ಸಬರಮತಿ ಆಶ್ರಮಕ್ಕೆ ದಾಳಿಯಿಟ್ಟ ಪೋಲೀಸರು ಗಾಂಧೀಜಿಯ ವಿರುದ್ಧ ರಾಜದ್ರೋಹದ ಆಪಾದನೆ ಹೊರಿಸಿ ಬಂಧಿಸಿದರು. ಆರು ವರ್ಷಗಳ ಶಿಕ್ಷೆ ನೀಡಿ ಜೈಲಿಗೆ ಕಳುಹಿಸಿದರು. ಜೈಲಿನಲ್ಲಿ ಸಾಧಾರಣ ಕೈದಿಯಂತೆಯೇ ಬದುಕುತ್ತಿದ್ದ ಗಾಂಧೀಜಿ 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಎಂಬ ಪುಸ್ತಕ ಬರೆದರು.


ಆ ದಿನಗಳಲ್ಲಿ ದೇಶದೊಳಗೆ ನಡೆಯುತ್ತಿದ್ದ ಎಲ್ಲ ಮುಷ್ಕರಗಳನ್ನೂ ಬ್ರಿಟಿಷರು ತಮ್ಮ 'ಒಡೆದು ಆಳುವ ನೀತಿ'ಮೂಲಕ ಒಬ್ಬರ ವಿರುದ್ಧ ಇನ್ನೊಬ್ಬರನ್ನು ಎತ್ತಿಕಟ್ಟಿ ಸದೆಬಡಿಯಲಾರಂಭಿಸಿದ್ದರು. ಭಾರತೀಯರ ಒಗ್ಗಟ್ಟಿನ ಸ್ವಾತಂತ್ರ್ಯ ದಾಹವನ್ನು ಅಳಿಸಿಹಾಕಲು, ಹಿಂದುಗಳನ್ನು ಮುಸ್ಲಿಮರ ವಿರುದ್ಧ, ಮುಸ್ಲಿಮರನ್ನು ಹಿಂದುಗಳ ವಿರುದ್ಧ ಎತ್ತಿ ಕಟ್ಟುವ ಆಟವಾಡಲಾರಂಭಿಸಿದರು. ಊರೊಳಗೆ ನಡೆಯುವ

ಸಣ್ಣ ಪುಟ್ಟ ಜಗಳಗಳಿಗೂ ಕೋಮುಬಣ್ಣ ಬಳಿದು ಊರಿಗೆ ಊರೇ ಉರಿಯುವಂತೆ ಮಾಡುತ್ತಿದ್ದರು. ಇದರಿಂದ ನೊಂದ ಗಾಂಧೀಜಿ, ಇಪ್ಪತ್ತೊಂದು ದಿನಗಳ ಉಪವಾಸ ವ್ರತ ತೊಟ್ಟು 'ಕೋಮು ಸೌಹಾರ್ದ'ಕ್ಕಾಗಿ ಪ್ರಾರ್ಥಿಸಿದರು.

ಅದೇ ದಿನಗಳಲ್ಲಿ 'ಅಖಿಲಭಾರತ ನೇಕಾರರ ಸಂಘ'ವನ್ನು ಹುಟ್ಟು ಹಾಕಿದ ಗಾಂಧೀಜಿ, ಖಾದಿಯ ಪ್ರಚಾರಕ್ಕಾಗಿ ದೇಶದ ಉದ್ದಗಲಕ್ಕೂ ಸಂಚರಿಸಿದರು. ಜನರಿಗೆ ಸ್ವದೇಶೀ ವಸ್ತುಗಳ ಮಹತ್ವವನ್ನು ವಿವರಿಸಲು ವಿದೇಶೀ ವಸ್ತ್ರವನ್ನು ಸುಡುವ ಚಳುವಳಿ ನಡೆಸಿದರು.

ದೇಶಾದ್ಯಂತ ನಡೆಯುತ್ತಿದ್ದ 'ಸ್ವಾತಂತ್ರ್ಯ ಸಮರ'ದ ಬಿಸಿ ಲಂಡನ್ನಿಗೂ ಮುಟ್ಟಿತು. ಕಣ್ಣೊರೆಸುವ ತಂತ್ರವಾಗಿ, ಭಾರತೀಯರು ಸ್ವರಾಜ್ಯ ಪಡೆಯಲು ಯೋಗ್ಯರಿದ್ದಾರೆಯೇ ಇಲ್ಲವೇ ಎಂಬುದನ್ನು ಸಮೀಕ್ಷೆ ಮಾಡಿ ವರದಿ ಸಲ್ಲಿಸಲು, ಸರ್ ಜಾನ್ ಸೈಮನ್ ಎಂಬವರ ನೇತೃತ್ವದಲ್ಲಿ ಆಯೋಗವನ್ನು ಕಳುಹಿಸಿತು. ಆ ಸಮಿತಿಯಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ಇದ್ದಿರಲಿಲ್ಲ. ಇದರಿಂದ ರೋಷಗೊಂಡ ಕಾಂಗ್ರೆಸ್ ನಾಯಕರು ಪ್ರತಿಭಟನೆಗೆ ಕರೆ ನೀಡಿದರು. ದೇಶಕ್ಕೆ ದೇಶವೇ ಪ್ರತಿಭಟಿಸಿತು. 'ಸೈಮನ್ ಹಿಂದಕ್ಕೆ ನಡಿ' ಎಂಬ ಘೋಷಣೆ ಮುಗಿಲು ಮುಟ್ಟಿತು.

ಪೋಲಿಸರಿಂದ ಬಂಧಿಸಲ್ಪಡುವುದು ಮತ್ತು ನ್ಯಾಯಾಲಯದಿಂದ ಬಿಡುಗಡೆಗೊಳ್ಳುವುದು ಎರಡೂ ಜನಸಾಮಾನ್ಯರ ದಿನಚರಿಯೇ ಆಗಿ ಹೋಯಿತು. ಗಾಂಧೀಜಿ,



ತಾವೇ ಪ್ರಕಟಿಸುತ್ತಿದ್ದ 'ಯಂಗ್ ಇಂಡಿಯಾ' ವಾರಪತ್ರಿಕೆಯಲ್ಲಿ 'ಸತ್ಯಶೋಧನೆ' ಎಂಬ ಆತ್ಮಕತೆಯನ್ನು ಪ್ರಕಟಿಸ ತೊಡಗಿದರು.

ಉಪ್ಪಿನ ಸತ್ಯಾಗ್ರಹ

ಸಬರಮತಿ ಆಶ್ರಮದಿಂದ ಸುಮಾರು ಇನ್ನೂರ ನಲುವತ್ತು ಮೈಲಿ ದೂರದಲ್ಲಿರುವ ದಂಡಿ ಎಂಬ ಪುಟ್ಟ ಹಳ್ಳಿಯಲ್ಲಿ ಬದುಕುವ ಬಡ ಜನರಿಗೆ, ಉಪ್ಪು ತಯಾರಿಸಿ ಮಾರುವುದೇ ಕುಲಕಸುಬು. ಉಪ್ಪಿನ ತಯಾರಕರ ಮೇಲೆ ವಿಧಿಸಲಾಗಿರುವ ತೆರಿಗೆಯನ್ನು ಹಿಂದಕ್ಕೆ ಪಡೆಯುವಂತೆ ಲಾರ್ಡ್ ಇರ್ವಿನರ ಸರಕಾರಕ್ಕೆ ಹಲವು ಬಾರಿ ವಿನಂತಿಸಿದ್ದರೂ ಲಾಭವಾಗಿರಲಿಲ್ಲ. ಕೊನೆಗೆ ಉಪ್ಪಿನ ಸತ್ಯಾಗ್ರಹದ ಘೋಷಣೆಯನ್ನೇ ಮಾಡಬೇಕಾಯಿತು.

ತುಂಡು ಖಾದಿಯುಟ್ಟು ಕೋಲಿನಾಸರೆಯಲ್ಲಿ ಹೆಜ್ಜೆಯಳೆಯುವ ಕಡ್ಡಿ ದೇಹದ ಅರುವತ್ತರ ಅರೆಬೆತ್ತಲ ಹುಡುಗ ಗಾಂಧೀಜಿಯ ಬೆನ್ನಹಿಂದೆ ಊರಿಗೆ ಊರೇ ಹೊರಟಿತು.

ದಿನವೊಂದರ ಹತ್ತು ಮೈಲಿಯಂತೆ ಇಪ್ಪತ್ತೈದು ದಿನಗಳ ಪಾದಯಾತ್ರೆ ತಂಗಿದ ಪ್ರತಿಯೊಂದು ಹಳ್ಳಿಯಲ್ಲೂ 'ರಾತ್ರಿಸಭೆ'ಗಳು. ಜಾತಿಪದ್ಧತಿಯ ಕಳಂಕ, ಅಸ್ಪೃಶ್ಯತೆಯ ಶಾಪ, ಕುಡಿತದ ದುಷ್ಪರಿಣಾಮ, ಖಾದಿಯ ಮಹತ್ವಗಳ ಬಗ್ಗೆ ನೇತಾರರಿಂದ ಭಾಷಣಗಳು. ಜಾಗತಿಕ ಪತ್ರಿಕೆಗಳಲ್ಲಿ 'ದಂಡಿಯಾತ್ರೆ' ಪ್ರತಿದಿನವೂ ಮುಖಪುಟದ ಸುದ್ದಿ; ಬಿಳಿಯರ


ಬೆವರಿಳಿಸಿ ಅದರಿಂದಲೂ ಉಪ್ಪು ಸೋಸಬಲ್ಲ ಬರಿಮೈ ಫಕೀರನ ನಗುವ ಭಾವಚಿತ್ರ. ಬ್ರಿಟಿಷ್ ಸರಕಾರಕ್ಕೆ ಉಪ್ಪಿನ ಸತ್ಯಾಗ್ರಹವು ನುಂಗಲಾರದ ತುತ್ತಾಯಿತು.

ಗಾಂಧೀಜಿಯ ಹೆಜ್ಜೆಯಲ್ಲಿ ಹೆಜ್ಜೆಯಿರಿಸಿ ಇಪ್ಪತ್ತನಾಲ್ಕು ದಿನಗಳ ಕಾಲ ನಡೆದುಬಂದ ಸಾವಿರಾರು ಸತ್ಯಾಗ್ರಹಿಗಳು, ಇಪ್ಪತ್ತೈದನೆಯ ದಿನ ದಂಡಿಯ ಕಡಲ ಕಿನಾರೆ ತಲುಪಿದಾಗ, ಸ್ವಾಗತಕ್ಕೆ ಸೇರಿದ್ದ ಲಕ್ಷಕ್ಕೂ ಹೆಚ್ಚು ಮಂದಿ ಕಡಲಿನ ಭೋರ್ಗರೆತವನ್ನೂ ಮೀರಿಸಿ ಜಯಘೋಷ ಕೂಗಿದ್ದರು.

ಸರಕಾರಕ್ಕೆ ಬೇರೆ ದಾರಿಯೇ ಇದ್ದಿರಲಿಲ್ಲ. ತನ್ನೆಲ್ಲಾ ಕ್ರೌರ್ಯವನ್ನು ನಿರಾಯುಧರಾದ ಜನರ ಮೇಲೆ ಪ್ರಯೋಗಿಸಿತು. ಲಾಟಿ ಬೀಸಿತು, ಬೂಟುಗಾಲಲ್ಲಿ ತುಳಿಯಿತು, ಗುಂಡು ಹಾರಿಸಿತು. ಆದರೂ ಜನರು ಹಿಂಸೆಗಿಳಿಯಲಿಲ್ಲ; ಯಾರೂ ಕೈಯೆತ್ತಲಿಲ್ಲ. ಲಾಟಿಗೆ ಮೈಯೊಡ್ಡಿದರು; ಗುಂಡಿಗೆ ಎದೆಯೊಡ್ಡಿದರು.

ಗಾಂಧೀಜಿ, ಮೋತಿಲಾಲ್ ನೆಹರೂ, ಸ್ವರೂಪರಾಣಿ ನೆಹರೂ, ಸರೋಜಿನಿದೇವಿ, ರಾಜೇಂದ್ರ ಪ್ರಸಾದ್, ರಾಜಾಜಿ, ಸರ್ದಾರ್ ಪಟೇಲ್, ಸುಭಾಸ್ಚಂದ್ರ ಭೋಸ್, ಆಚಾರ್ಯ ಕೃಪಲಾನಿ, ಮೌಲಾನಾ ಆಝಾದ್, ಅಸಫ್ ಆಲಿ, ನಾರಿಮನ್ ಮೊದಲಾದವರನ್ನೆಲ್ಲ ಪೋಲೀಸರು ಬಂಧಿಸಿ ಜೈಲಿಗೆ ತಳ್ಳಿದರು.

ದೇಶಾದ್ಯಂತ ಅಸಹಕಾರ, ಪ್ರತಿಭಟನೆ, ಮೆರವಣಿಗೆ, ಮುಷ್ಕರಗಳು ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿದವು.





ಗಾಂಧೀಜಿಯ ಒಡನಾಡಿಯಾಗಿದ್ದುಕೊಂಡು, ಗಡಿನಾಡ ಗಾಂಧಿಯೆಂದೇ ಕರೆಯಲ್ಪಡುತ್ತಿದ್ದ ಖಾನ್ ಅಬ್ದುಲ್ ಗಫಾರ್ ಖಾನರು, ಗಡಿನಾಡಿನಲ್ಲಿ ಸಾವಿರಾರು ಪಠಾಣರನ್ನು ಅಹಿಂಸಾತ್ಮಕ ಹೋರಾಟಕ್ಕೆ ಇಳಿಸಿಬಿಟ್ಟರು.

ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್ಡೊನಾಲ್ಡ್ರವರು ಲಂಡನ್ನಿನಿಂದ ಭಾರತದ ವೈಸರಾಯಿ ಲಾರ್ಡ್ ಇರ್ವಿನ್ ಅವರಿಗೆ ಸಂದೇಶ ಕಳುಹಿಸಿದರು, 'ಇನ್ನು ತಡ ಮಾಡಿದರೆ ಅನಾಹುತವಾದೀತು. ಇಡಿಯ ಜಗತ್ತು ನಮ್ಮನ್ನೇ ದಿಟ್ಟಿಸಿ ನೋಡುತ್ತಿದೆ, ಗಾಂಧೀಜಿಯನ್ನು ಹೇಗಾದರೂ ಒಪ್ಪಿಸಿ ಲಂಡನ್ನಿಗೆ ಕಳುಹಿಸಿರಿ. ದುಂಡುಮೇಜಿನ ಸುತ್ತ ಕುಳಿತು ನಾವಿಲ್ಲಿ ಮಾತನಾಡಿ ಏನಾದರೊಂದು ತೀರ್ಮಾನ ಮಾಡುತ್ತೇವೆ.'



ದುಂಡು ಮೇಜಿನ ಪರಿಷತ್ತು

ಲಂಡನ್ನಿನ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧೀಜಿ ಉಟ್ಟಿದ್ದ ತುಂಡು ಬಟ್ಟೆಯಲ್ಲೇ ಹೊರಟುಬಿಟ್ಟಿದ್ದರು.

'ಸ್ವತಂತ್ರ ಭಾರತವನ್ನು ಆಳುವ ಹಕ್ಕು ಕೇವಲ ಕಾಂಗ್ರೆಸ್ಗೆ ಮಾತ್ರವಿದೆ. ಅಂತೆಯೇ, ಸ್ವತಂತ್ರ ಭಾರತದಲ್ಲಿ ವಾಸಿಸುವ ಪ್ರತಿಯೊಂದು ಜಾತಿ, ಪಂಗಡ, ಧರ್ಮ, ಗುಂಪುಗಳಿಗೆ ನ್ಯಾಯವನ್ನೊದಗಿಸುವ ಜವಾಬ್ದಾರಿಯೂ ಕಾಂಗ್ರೆಸ್'ಗೆ ಮಾತ್ರವಿದೆ. ಆದ್ದರಿಂದ ಇಡಿಯ ದೇಶದ ಜನರಿಗೆ, ಅವರ ಮೂಲಭೂತ ಹಕ್ಕಾದ ಸ್ವಾತಂತ್ರ್ಯವನ್ನು ಕೊಡಿರಿ. ಉಳಿದ್ದದ್ದನ್ನು ನಾವೇ ಪರಿಹರಿಸಿಕೊಳ್ಳುತ್ತೇವೆ' ಎಂದರು ಗಾಂಧೀಜಿ.

ದುಂಡುಮೇಜಿನ ಪರಿಷತ್ತಿನಲ್ಲಿ, ಬಿಳಿಯರಿಂದ ಮಂಡಿತವಾದ ಯಾವುದೇ ಸಲಹೆಗಳಿಗೂ ಗಾಂಧೀಜಿ ತಮ್ಮ ಸಮ್ಮತಿ ಸೂಚಿಸಲಿಲ್ಲ. ದಿನಗಳ ಮೇಲೆ ದಿನಗಳು ಉರುಳಿದವು.

ಕೊನೆಗೆ ಇಂಗ್ಲೆಂಡಿನ ಚಕ್ರವರ್ತಿ ಜಾರ್ಜ್ ಸಾಹೇಬರನ್ನೂ ಅರಮನೆಯ ಶಿಷ್ಟಾಚಾರವನ್ನೆಲ್ಲ ಬದಿಗಿಟ್ಟು ಬರಿಮೈಯಲ್ಲೇ ಕಂಡು ಮಾತನಾಡಿಸಿದ್ದೂ ವ್ಯರ್ಥವಾಯಿತು.

ಇಂಗ್ಲೆಂಡಿನಿಂದ ಸ್ವದೇಶಕ್ಕೆ ಮರಳಿಬಂದ ಗಾಂಧೀಜಿ ತಮ್ಮ ಅಸಹಕಾರ ಚಳುವಳಿಯನ್ನು ಮುಂದುವರಿಸಿದರು. ಸರಕಾರವೂ ಸಿಟ್ಟಿಗೆದ್ದಿತು. ಗಾಂಧೀಜಿಯನ್ನು ಬಂಧಿಸಿ ಸೆರೆಮನೆಯಲ್ಲಿ ಕೂಡಿ ಹಾಕಿತು. ಸೆರೆಮನೆಯಿಂದ ಹೊರಬರುತ್ತಿರುವಾಗಲೇ ಗಾಂಧೀಜಿ, ತಮ್ಮ ಮುಂದಿನ



ಕಾರ್ಯಕ್ರಮದ ರೂಪವನ್ನು ನಿರ್ಧರಿಸಿ ಬಿಟ್ಟಿದ್ದರು.

ತಮ್ಮ ಎಲ್ಲ ಶಕ್ತಿಯನ್ನೂ ಅಸ್ಪೃಶ್ಯರ ಉದ್ಧಾರಕ್ಕಾಗಿಯೇ ಮೀಸಲಿಟ್ಟ ಗಾಂಧೀಜಿ ಅಸ್ಪೃಶ್ಯರ ಸಂಘಟನೆಗೆ ಮುಂದಾದರು. ಅಸ್ಪೃಶ್ಯರು ದೇವರ ಮಕ್ಕಳು. ಅವರು ದೇವರಿಗೆ ಹೆಚ್ಚು ಹತ್ತಿರವಾದವರು.

ಅವರನ್ನು 'ಹರಿಜನರು' ಎಂದು ಬಾಪೂಜಿ ಕರೆದರು. 'ಹರಿಜನ ಸೇವಕ ಸಂಘವನ್ನು' ಸ್ಥಾಪಿಸಿದರು. 'ಹರಿಜನ' ಎಂಬ ವಾರಪತ್ರಿಕೆ ಪ್ರಕಟಿಸಲಾರಂಭಿಸಿದರು. ತಮ್ಮ ಲೇಖನಗಳಲ್ಲಿ, ಅಸ್ಪೃಶ್ಯತೆಯನ್ನು ಹಿಂದೂ ಧರ್ಮದ ಶಾಪ ಎಂದರು.

'ಹಿಂದೂ ಧರ್ಮ ನಿರ್ನಾಮವಾದರೂ ಸಹಿಸಿಯೇನು, ಆದರೆ ಹಿಂದೂ ಧರ್ಮಕ್ಕೆ ಶಾಪದಂತೆ ಅಂಟಿಕೊಡಿರುವ ಅಸ್ಪೃಶ್ಯತೆಯನ್ನು ಸಹಿಸಲಾರೆ' ಎಂದು ಬರೆದರು.

ದೇವಸ್ಥಾನಗಳಲ್ಲಿ ಹರಿಜನರಿಗೂ ಪ್ರವೇಶ ನೀಡುವಂತೆ ಗಾಂಧೀಜಿ ಕರೆ ನೀಡಿದರು.

ಗಾಂಧೀಜಿಯ ಕರೆಯನ್ನು ಗೌರವಿಸಿದ ಹಲವಾರು ದೇವಸ್ಥಾನಗಳು ಅಸ್ಪೃಶ್ಯರಿಗಾಗಿ ತಮ್ಮ ಬಾಗಿಗಳನ್ನು ತೆರೆದವು. ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯುವನ್ನೊದಗಿಸುವ ಗಾಂಧೀಜಿಯವರ ಚಳುವಳಿಗೆ ಕವಿಗುರು ರವೀಂದ್ರನಾಥ ಟಾಗೋರ, ಡಾ. ಭೀಮರಾವ್ ಅಂಬೇಡ್ಕರ್, ಬಾಬು ಜಗಜೀವನರಾಮ್, ಡಾ. ರಾಜೇಂದ್ರ ಪ್ರಸಾದ್, ರಾಜಾಜಿ ಮೊದಲಾದ ಹಿರಿಯ ನಾಯಕರು ಬೆಂಬಲ ನೀಡಿದರು.

ದೇಶ ವಿಭಜನೆ

ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಪರಸ್ಪರ ಸಹಕರಿಸುತ್ತಿದ್ದ ಅಮೆರಿಕಾ, ಬ್ರಿಟನ್, ರಷ್ಯಾ, ಚೀನಾಗಳನ್ನು ಮಿತ್ರರಾಷ್ಟ್ರಗಳೆಂದು ಕರೆಯುತ್ತಿದ್ದರು. ಈ ಮಿತ್ರರಾಷ್ಟ್ರಗಳಿಗೆ, ಜರ್ಮನಿಯ ಹಿಟ್ಲರ್ ಎಂಬ ಸರ್ವಾಧಿಕಾರಿಯ ಜತೆ ಸೇರಿದ್ದ ಇಟಲಿ, ಸ್ಪೇಯ್ನ್, ಜಪಾನ್ ದೇಶಗಳು ಶತ್ರುರಾಷ್ಟ್ರಗಳಾಗಿದ್ದವು. ಆ ದಿನಗಳಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತವು ಮಿತ್ರರಾಷ್ಟ್ರದ ಗುಂಪಿನಲ್ಲಿ ಸಹಜವಾಗಿ ಗುರುತಿಸಿಕೊಂಡಿತ್ತು. ಸೈನ್ಯದ ಅಗತ್ಯಗಳಿಗಾಗಿ ಬಿಳಿಯರ ಸೈನ್ಯವು ಬಂಗಾಳದ ಸುತ್ತ ಮುತ್ತಲಿನ ಊರುಗಳನ್ನು ಕೊಳ್ಳೆ ಹೊಡೆದು, ಇದ್ದ ಬಿದ್ದ ದವಸ ಧಾನ್ಯವನ್ನೆಲ್ಲ ಸೈನಿಕರು ಹೊತ್ತು ಒಯ್ಯತೊಡಗಿದ್ದರಿಂದ, ಜನರು ಹಸಿವಿನಿಂದ ಸಾಯತೊಡಗಿದ್ದರು.

ಈ ನಡುವೆ ಸುಭಾಸ್ಚಂದ್ರ ಬೋಸರು ಕಲಕತ್ತಾದ ಜೈಲಿನಿಂದ ತಪ್ಪಿಸಿಕೊಂಡರು. ಜರ್ಮನಿ ತಲುಪಿ, ಹಿಟ್ಲರನ ನೆರವು ಪಡೆದು, ಜಪಾನೀಯರ ವಶದಲ್ಲಿದ್ದ ಬರ್ಮಾ ಸೇರಿ 'ಸ್ವತಂತ್ರ ಭಾರತ ರಾಷ್ಟ್ರೀಯ ಸೇನೆ' (ಐ.ಎನ್.ಎ.) ಕಟ್ಟಿ ಬ್ರಿಟಿಷರ ವಿರುದ್ಧ ಯುದ್ಧ ಸಾರಿದರು. ಜಪಾನಿಯರ ವಿಮಾನಗಳು ಬ್ರಿಟಿಷರ ವಸಾಹತು ಆಗಿದ್ದ ಬಂಗಾಳದ ಗಡಿಗೆ ಬಂದು ಬಾಂಬುಗಳ ಸುರಿಮಳೆಗರೆದವು. ಬ್ರಿಟಿಷ್ ಸರಕಾರವು ಕಂಗಾಲಾಯಿತು.

'ಅರೆಬೆತ್ತಲೆಯ ಫಕೀರನೊಂದಿಗೆ ಏನು ಮಾತು' ಎಂದು



ಹಿಂದೊಮ್ಮೆ ಉಡಾಫೆಯ ಮಾತನಾಡಿದ್ದ ಬ್ರಿಟಿಷ್ ಪ್ರಧಾನಿ ಚರ್ಚಿಲ್, ಗಲಿಬಿಲಿಗೊಂಡು ಗಾಂಧೀಜಿಯ ಮೊರೆಹೊಕ್ಕರು. ಸರ್ ಸ್ಟಾಫರ್ಡ್ ಕ್ರಿಪ್ಸ್ ಎಂಬ ಹಿರಿಯ ಅಧಿಕಾರಿಯನ್ನು ಗಾಂಧೀಜಿಯವರೊಂದಿಗೆ ಸಂಧಾನಕ್ಕೆ ಕಳುಹಿಸಿದರು. ಆದರೆ, ಇದುವರೆಗೆ ಸಾಕಷ್ಟು ಸಂಧಾನದ ಮಾತುಗಳಿಗೆ ಬಲಿಯಾಗಿ ಮೋಸ ಹೋಗಿದ್ದ ಭಾರತೀಯ ನಾಯಕರು ಮತ್ತೊಮ್ಮೆ ಮೋಸಹೋಗಲು ಸಿದ್ಧರಿರಲಿಲ್ಲ.

ಬೊಂಬಾಯಿಯಲ್ಲಿ ಲಕ್ಷಾಂತರ ಮಂದಿ ಕಾಂಗ್ರೆಸ್ಸಿಗರು ಮೌಲಾನಾ ಅಬ್ದುಲ್ ಕಲಾಂ ಆಜಾದ್ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಸಭೆಯಲ್ಲಿ ಎರಡು ತಾಸುಗಳ ಭಾಷಣ ಮಾಡಿದ ಗಾಂಧೀಜಿ, ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂಬ ಆದೇಶ ನೀಡಿದರು. ಎಲ್ಲ ಭಾರತೀಯರಿಗೆ 'ಮಾಡು ಇಲ್ಲವೇ ಮಡಿ' ಎಂಬ ಕರೆ ನೀಡಿದರು. ಗಾಂಧೀಜಿಯ ಕರೆಗೆ ಓಗೊಟ್ಟ ಜನರು ದೇಶಾದ್ಯಂತ ಬೀದಿಗಿಳಿದು ಒಕ್ಕೊರಲಿನಿಂದ ಘೋಷಿಸಿದರು.

ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ

ಪೋಲೀಸರು ಸಿಕ್ಕಿಸಿಕ್ಕಿದವರನ್ನು ಸೆರೆಹಿಡಿದು ಜೈಲಿಗೆ ತುಂಬಿದರು. ಮೂರೇ ದಿನಗಳಲ್ಲಿ ದೇಶದ ಜೈಲುಗಳೆಲ್ಲ ತುಂಬಿಹೋದವು. ಜೈಲುಗಳಲ್ಲಿ ಜಾಗ ಸಾಕಾಗದಾದಾಗ ಶಾಲೆಗಳು, ಛತ್ರಗಳು ಮಾತ್ರವಲ್ಲ ತುಂಡರಸರುಗಳ ಅರಮನೆಗಳೂ ಜೈಲುಗಳಾಗಿ ಮಾರ್ಪಟ್ಟುವು. ಗಾಂಧೀಜಿ,

ಕಸ್ತೂರಿಬಾಯಿ, ಸರೋಜಿನಿ ನಾಯ್ಡು ಮೊದಲಾದವರು ಪುಣೆಯ ಜೈಲು ಸೇರಿದರು.

ಗಾಂಧೀಜಿಯವರ ಜತೆ ಜೈಲಿನಲ್ಲಿದ್ದ ಮಹದೇವ ದೇಸಾಯಿಯವರು ಅಲ್ಲಿಯೇ ನಿಧನರಾದರು. ಜಯಪ್ರಕಾಶ್ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ್ ಮತ್ತು ಶ್ರೀಮತಿ ಅರುಣ ಅಸಫ್ ಆಲಿ ಜೈಲಿನಿಂದ ತಪ್ಪಿಸಿಕೊಂಡರು; ಭೂಗತರಾಗಿ ಕೆಲಸ ಮಾಡತೊಡಗಿದರು.


ಜಗತ್ತಿನಾದ್ಯಂತ ಭಾರತದ ಸ್ವಾತಂತ್ರ್ಯದ ಸಮರವು ಸುದ್ದಿ ಮಾಡಿತು. ಬರ್ನಾಡ್ ಷಾ ರಂತಹ ಬುದ್ಧಿಜೀವಿಗಳು ಬ್ರಿಟಿಷ್ ಸರಕಾರದ ವರ್ತನೆಯನ್ನು ಬಲವಾಗಿ ಖಂಡಿಸಿದರು.

ಈ ನಡುವೆ ಜೈಲಿನಲ್ಲಿ ಬಂಧಿಯಾಗಿದ್ದ ಕಸ್ತೂರಿಬಾಯಿ ನಿಧನರಾದರು.

ಎಪ್ಪತ್ತೆಂಟು ವರ್ಷಗಳ ಮುದುಕ ಗಾಂಧೀಜಿಯನ್ನು ಎರಡು ವರ್ಷಗಳ ಕಾಲ ಜೈಲಿನಲ್ಲಿ ಕೂಡಿ ಹಾಕಿದ್ದ ಬಿಳಿಯರು, ಕೊನೆಗೂ ಅವರನ್ನು ಬಿಡುಗಡೆ ಮಾಡಿದರು.

ಈ ನಡುವೆ ಅಮೇರಿಕನ್ನರು ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಅಣುಬಾಂಬು ಎಸೆದು ಲಕ್ಷಾಂತರ ನಾಗರಿಕರ ಹತ್ಯೆ ನಡೆಸಿದರು. ಜಗತ್ತೇ ದಿಗ್ಭ್ರಮೆಗೊಂಡಿತು. ಸಮರ ನಿಂತಿತು.

ಆದರೆ ಭಾರತದ ಸ್ವಾತಂತ್ರ್ಯ ಸಮರ ನಿಲ್ಲುವ ಯಾವ



ಪಾಪು ಬಾಪು

ಲಕ್ಷಣವೂ ಬ್ರಿಟಿಷರಿಗೆ ಕಾಣಿಸಲಿಲ್ಲ. ಸ್ವಾತಂತ್ರ್ಯ ಪಡೆಯದೆ ಭಾರತೀಯರು ವಿರಮಿಸುವವರಲ್ಲ ಎಂಬ ಸತ್ಯ ಅವರಿಗೆ ಅರಿವಾಗಿಬಿಟ್ಟಿತ್ತು. ತಮಗೆ ಭಾರತದಲ್ಲಿ ಇನ್ನು ಉಳಿಗಾಲವಿಲ್ಲ ಎಂಬುದು ಖಂಡಿತವಾಗಿತ್ತು. ಆದರೂ, ಗಂಟು ಮೂಟೆ ಕಟ್ಟಿ ಹೊರಡುವ ಮೊದಲು, ತಮ್ಮ 'ಒಡೆದು ಆಳುವ ನೀತಿ'ಯ ವಿಷವನ್ನು ಈ ನೆಲದ ತುಂಬೆಲ್ಲ ಹರಿಸಿಯೇಬಿಟ್ಟರು.

ಒಡೆದು ಆಳುವ ನೀತಿ

ದೇಶ ವಿಭಜನೆಯ ವಿಷ ತನ್ನ ಕೆಲಸವನ್ನು ಆರಂಭಿಸಿತು.

ಅದುವರೆಗೂ ಗಾಂಧೀಜಿಯ 'ಸತ್ಯಾಗ್ರಹ'ದಲ್ಲಿ ಅಣ್ಣ ತಮ್ಮಂದಿರಂತೆ ಜತೆಗೂಡಿ ಭಾಗವಹಿಸಿದ್ದ ಹಿಂದೂ ಮತ್ತು ಮುಸ್ಲಿಮರು ಇದ್ದಕ್ಕಿದ್ದಂತೆ ಪರಮ ಶತ್ರುಗಳಂತೆ ಜಗಳಾಡತೊಡಗಿದರು.

ನಿನ್ನೆಯವರೆಗೆ ಗಾಂಧೀಜಿಯ ಅಹಿಂಸಾತ್ಮಕ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಎಲ್ಲ ಕಷ್ಟ ನಷ್ಟಗಳನ್ನು ಸಹಿಸಿಕೊಂಡಿದ್ದವರು, ಇಂದು ಹಿಂಸೆ, ಪ್ರತಿಹಿಂಸೆಗೆ ಕಾರಣರಾದರು.

ಬ್ರಿಟಿಷ್ ಪೋಲೀಸರ ಬೂಟುಗಾಲಿಗೆ ಬೆದರದಿದ್ದ ಹಿಂದೂ ಭಾರತೀಯನು ನೆರೆಮನೆಯ ಮುಸ್ಲಿಮನ ಹೆಜ್ಜೆಸಪ್ಪಳಕ್ಕೂ ಬೆವರತೊಡಗಿದನು.

ಬ್ರಿಟಿಷ್ ಪೋಲೀಸರ ಬಂದೂಕಿನ ಗುಂಡಿಗೆ



ಎದೆಯೊಡ್ಡಲು ಅಂಜದಿದ್ದ ಮುಸ್ಲಿಂ ಭಾರತೀಯನು ನೆರೆಮನೆಯ ಹಿಂದೂವಿನ ಕೈಮ್ಮಿನ ಸದ್ದಿಗೇ ನಡುಗತೊಡಗಿದನು.

ಎರಡೂ ಧರ್ಮಗಳಲ್ಲಿದ್ದ ಮತೀಯವಾದಿ ನಾಯಕರು ತಮ್ಮ ಸ್ವಾರ್ಥಕ್ಕಾಗಿ ಜನರನ್ನು ಹುರಿದುಂಬಿಸಿದರು.

ಉತ್ತರ ಭಾರತದ ಬಹುಪಾಲು ಹಾದಿ ಬೀದಿಗಳೆಲ್ಲ ರಣರಂಗವಾಯಿತು. ಬಂಗಾಳದ ಮನೆ ಮಠಗಳೆಲ್ಲ ಅಗ್ನಿಗಾಹುತಿಯಾಯಿತು. ಪಂಜಾಬದ ಜನರೆಲ್ಲ ದಿಕ್ಕಾಪಾಲಾಗಿ ಓಡತೊಡಗಿದರು. ಜನರೆಲ್ಲ ಆವೇಶಭರಿತರಾಗಿದ್ದರು. ಅವರಿಗೆ ತಾವೇನು ಮಾಡುತ್ತಿದ್ದೇವೆ

ಎಂಬ ಕಲ್ಪನೆಯಿದ್ದಿರಲಿಲ್ಲ. ಅದೊಂದು ಹುಚ್ಚು ಆವೇಶ.


ಎಲ್ಲವೂ ತಮ್ಮ ನಿರೀಕ್ಷೆಯಂತೆಯೇ ನಡೆಯುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡ ಭಾರತದ ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್, ಬ್ರಿಟಿಷ್ ಸರಕಾರದ 'ಒಡೆದು ಆಳುವ' ವಿಷದ ಕೊನೆಯ ಹನಿಯನ್ನು ಭಾರತದ ನೆಲದ ಮೇಲೆ ಸುರಿದರು.

ಭಾರತದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯ ನೇತೃತ್ವದಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಒಟ್ಟಾಗಿ ಹೋರಾಡಿದ್ದ ದೇಶನಾಯಕರ ಎದುರು, ವಿಭಜನೆಯ ಕರಾಳ ಸೂತ್ರ ಮಂಡಿಸಿದರು.

ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ, ಮೌಲಾನ ಅಬ್ದುಲ್ ಕಲಾಂ ಆಝಾದ್, ವಲ್ಲಭಭಾಯಿ ಪಟೇಲ್, ಜವಾಹರಲಾಲ ನೆಹರೂ, ಮಹಮ್ಮದಾಲೀ ಜಿನ್ನಾ ಮುಂತಾದ ಜನನಾಯಕರು ದೇಶವಿಭಜನೆಗೆ ಸಮ್ಮತಿ ಸೂಚಿಸಿದರು. ಗಡಿನಾಡ ಗಾಂಧೀ ಖಾನ್ ಅಬ್ದುಲ್ ಗಫಾರ್ ಖಾನ್ ಮಾತ್ರ ಕೋಪದಿಂದ ಸಭಾತ್ಯಾಗ ಮಾಡಿದರು. ಹತಾಶರಾದ ಗಾಂಧೀಜಿಗೆ ಮಾತೇ ಹೊರಡಲಿಲ್ಲ

ಮುಂದೆ ಕೆಲವೇ ದಿನಗಳಲ್ಲಿ, ಭಾರತ ಮತ್ತು ಪಾಕಿಸ್ಥಾನಗಳೆಂಬ ಎರಡು ರಾಷ್ಟ್ರಗಳು ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡವು.

ಸತ್ಯಾಗ್ರಹ ಚಳುವಳಿಯಲ್ಲಿ ಗಾಂಧೀಜಿಯ ಹೆಗಲಿಗೆ



ಗಾಂಧೀಜಿ ಮತ್ತು ಜಿನ್ನಾ ಮಾತುಕತೆ

ಹೆಗಲು ಕೊಟ್ಟು ಹೋರಾಡಿ ಅವರ ಪ್ರೀತಿಯನ್ನು ಗೆದ್ದುಕೊಂಡಿದ್ದ ಜವಾಹರಲಾಲ್ ನೆಹರೂ ಮತ್ತು ಮಹಮ್ಮದಾಲೀ ಜಿನ್ನಾ, ಈ ಇಬ್ಬರು ನಾಯಕರು ಎರಡು ಸ್ವತಂತ್ರ ಗಣರಾಜ್ಯಗಳ ಪ್ರಧಾನ ಮಂತ್ರಿಗಳಾಗಿ ಅಧಿಕಾರಕ್ಕೇರಿದರು.

'ಪ್ರಪಂಚವೇ ನಿದ್ರೆ ಹೋಗಿರುವ ಈ ನಡುರಾತ್ರಿಯಲ್ಲಿ ಭಾರತವು ನವಜೀವನಕ್ಕಾಗಿ ಎಚ್ಚೆತ್ತಿದೆ' ಎಂದು ನವಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಾಹಲಾಲ್ ನೆಹರೂ ಸಂಸತ್ ಭವನದಲ್ಲಿ ಸಂಭ್ರಮದಿಂದ ಭಾಷಣ ಮಾಡಿದರು.

ದೇಶಕ್ಕೆ ದೇಶವೇ ಹುಚ್ಚೆದ್ದು ಕುಣಿಯಿತು.

ಆದರೆ ಬಾಪೂಜಿ ಎಲ್ಲಿದ್ದಾರೆ?


ಮಹಾತ್ಮ

ಬಿರ್ಲಾ ಭವನದಲ್ಲಿ ನಡೆದ ಪ್ರಾರ್ಥನಾ ಸಭೆಯ ಬಳಿಕ ಬಾಪೂಜಿ ಹೇಳುತ್ತಿದ್ದರು.

'ನೀವು ಹುಚ್ಚು ಆವೇಶಕ್ಕೆ ಬಲಿಯಾಗಬಾರದು. ಪಾಕಿಸ್ತಾನದಲ್ಲಿ ಹಿಂದೂಗಳನ್ನು ಮುಸ್ಲಿಮರು ಕೊಲ್ಲುತ್ತಿರುವ ಕಾರಣಕ್ಕೆ, ಹಿಂದೂಸ್ತಾನದಲ್ಲಿ ಹಿಂದುಗಳು ಮುಸ್ಲಿಮರನ್ನು ಕೊಲ್ಲತೊಡಗಿದರೆ ಇದಕ್ಕೆ ಕೊನೆಯೆಲ್ಲಿ? ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬ ಮಾತನ್ನು ನಾನು ಒಪ್ಪಲಾರೆ. ಭಾರತದ ಹಿಂದುಗಳು ಕೊನೆಯ ತನಕವೂ ಒಳ್ಳೆಯವರಾಗಿ ಉಳಿದರೆ, ಅಲ್ಲಿ ಪಾಕಿಸ್ತಾನದ ಮುಸ್ಲಿಮರು ಒಳ್ಳೆಯವರಾಗಲೇಬೇಕಾಗುತ್ತದೆ.'

ಆದರೆ, ಕೆಲವೊಂದು ತೀವ್ರವಾದಿ ಹಿಂದೂ ಯುವಕರಿಗೆ ಬಾಪೂಜಿಯ ವರ್ತನೆ ಇಷ್ಟವಾಗಲಿಲ್ಲ. ಬಾಪೂಜಿಯವರು ಮುಸ್ಲಿಮರ ಪರವಾಗಿ ಅತಿಯಾದ ಪಕ್ಷಪಾತದ ಧೋರಣೆಯನ್ನು ಅನುಸರಿಸುತ್ತಿದ್ದಾರೆ ಎಂದು ಅವರು ಭಾವಿಸಿದ್ದರು. ಪ್ರತಿದಿನ ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಬಾಪೂಜಿ ಮಾಡುತ್ತಿದ್ದ ಭಾಷಣಗಳಲ್ಲಿ, ಹಿಂದೂ ವಿರೋಧಿ ಧೋರಣೆಗಳೇ ಹೆಚ್ಚಾಗಿರುತ್ತದೆಯೆಂದು ಅವರು ಅಸಹನೆಗೊಂಡಿದ್ದರು.

ಪ್ರಾರ್ಥನಾ ಸಭೆಗಳಲ್ಲಿ ಒಂದು ಬಾರಿ ನಾಡ ಬಾಂಬುಗಳನ್ನು ಸ್ಫೋಟಿಸಿ ಬಾಪೂಜಿಯನ್ನು ಬೆದರಿಸಲು ಯತ್ನಿಸಿದ್ದೂ ವ್ಯರ್ಥವಾಗಿತ್ತು. ಏಕೆಂದರೆ ಬಾಂಬು ಸ್ಫೋಟದ





ನಂತರವೂ ಬಾಪೂಜಿ ತನ್ನ ದಿನಚರಿಯನ್ನು ಬದಲಿಸಲಿಲ್ಲ.

ಬಾಂಬು ಎಸೆದವರನ್ನು ಬಾಪೂಜಿ ಬಹಿರಂಗವಾಗಿಯೇ ಕ್ಷಮಿಸಿಬಿಟ್ಟಿದ್ದರು.

ಯುಗಪುರುಷ

ಶುಕ್ರವಾರದ ಸಂಜೆಯ ಹೊತ್ತು.

ಸುಮಾರು ಸಾವಿರದಷ್ಟು ಮಂದಿ ಬಾಪೂಜಿಯ ದರ್ಶನಕ್ಕಾಗಿ ಬಿರ್ಲಾ ಭವನದಲ್ಲಿ ಕಾದು ನಿಂತಿದ್ದರು.

ಸಂಜೆಯ ಪ್ರಾರ್ಥನಾ ಸಭೆಗೆ ಬಾಪೂಜಿ ಹೊರಟರು. ತಮ್ಮ ಕೊಠಡಿಯಿಂದ ಹೊರಗೆ ಬಂದರು.

ತಮ್ಮ ಮೊಮ್ಮಕ್ಕಳಾದ ಅಭಾ ಮತ್ತು ಮನು ಹೆಗಲುಗಳ ಮೇಲೆ ಕೈಯಿರಿಸಿಕೊಂಡು ನಡೆದರು.

ಸಭೆ ನಡೆಯಲಿರುವ ಅಂಗಳದ ಮೆಟ್ಟಲು ಏರಿದ ಬಾಪೂಜಿ, ಸಭಿಕರ ವಂದನೆಗಳಿಗೆ ಕೈಮುಗಿದು ಪ್ರತಿವಂದಿಸುತ್ತಾ ಹೆಜ್ಜೆ ಹಾಕಿದರು.

ಗುಂಪಿನ ನಡುವಿನಿಂದ ಎದುರು ಬಂದ ಯುವಕ ನಾಥೂರಾಮ ಗೋಡ್ಸೆಯ ನಮಸ್ಕಾರವನ್ನೂ ಬಾಪೂಜಿ ಎದೆತುಂಬಿ ಸ್ವೀಕರಿಸಿದರು.

ಬಳಿಕ, ಅವನ ಪಿಸ್ತೂಲಿನಿಂದ ಸಿಡಿದು ಬಂದ ಮೂರೂ ಗುಂಡುಗಳನ್ನು ತಮ್ಮ ಎದೆಯೊಳಗೆ ತುಂಬಿಕೊಂಡರು; ಭೂಮಿಗೆ ಬಿದ್ದರು.

ಬಾಪೂಜಿಗೆ ಕಣ್ಣು ಕತ್ತಲೆ ಬಂದಂತಾಯಿತು. ಕಣ್ಣು ತೆರೆಯಲು ಯತ್ನಿಸಿದರು; ಸಾಧ್ಯವಾಗಲಿಲ್ಲ.

ಯುಗಪುರುಷನ ಉಸಿರು ನಿಂತಿತು.

ಯುಗಪುರುಷನ ಮೇಲೆ ಯಾರೂ ಗೆರೆ ಎಳೆಯದಿರಲಿ.




ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ

ಟಿಪ್ಪಣಿ





ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
ದೂರವಾಣಿ: 080–2202 8001/2 | ಫ್ಯಾಕ್ಸ್ : 080–2286 3794

ಕರ್ನಾಟಕ ವಾರ್ತೆ
karnatakainformation.gov.in